ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಇಷ್ಟು ಹೊತ್ತಿಗಾಗಲೇ ನಾನು ವಿಚಾರ ಪ್ರಸ್ತಾವನೆ ಮಾಡಿ ಮುಗಿಸಿ ಬಿಡುತ್ತಿದ್ದೆ.

ಶ್ರೀ ಎಸ್.ಎಸ್. ಪಾಟೀಲ್: ರೈತರ ವಿಚಾರ ಬಂದಾಗ ತಾವುಗಳು ಕಾಯಿದೆ ವಿಚಾರವನ್ನು ಪ್ರಸ್ತಾಪ ಮಾಡುತ್ತೀರಿ.

ಅಧ್ಯಕ್ಷರು: ತಾವುಗಳು 6 ಜನರು ಪ್ರಸ್ತಾವನೆಗೆ ಸಹಿ ಹಾಕಿದ್ದೀರಿ. ಆದರಲ್ಲಿ ಮೂರು ಜನರು ಯಾರಾದರೂ ಮಾತನಾಡಿ.

ಆ) ಈರುಳ್ಳಿ ಬೆಲೆಯ ಕುಸಿತದಿಂದ ರೈತರಿಗೆ ಉಂಟಾಗಿರುವ ತೊಂದರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ ಕ್ಷೇತ್ರ): ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ತಮ್ಮ ಅನುಮತಿಯನ್ನು ಕೋರಿ ನಿಯಮ 69ರ ಮೇರೆಗೆ ಈ ಸದನದಲ್ಲಿ ಬಹಳ ಮಹತ್ತರವಾದ ವಿಚಾರವನ್ನು ನಾವು ಪ್ರಸ್ತಾಪ ಮಾಡಬಯಸುತ್ತೇವೆ. ನಾವು ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಿದ ನಂತರ ಅದಕ್ಕೆ ಅನುಮತಿ ಕೊಡುವುದು, ಬಿಡುವುದು ತಮ್ಮ ಅಧಿಕಾರ ವ್ಯಾಪ್ತಿಗೆ ಬಿಟ್ಟಿರುವ ವಿಚಾರ. ನಾವು ವಿಷಯ ಪ್ರಸ್ತಾವನೆಯ ಮೂಲಕ ತಮ್ಮನ್ನು ಕನ್ವಿನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದು ಬಹಳ ಮಹತ್ತರ ವಿಚಾರ. ಈ ರೀತಿಯ ಸಮಸ್ಯೆಗಳು ಪದೇ ಪದೇ ಬರುತ್ತಲೇ ಇರುತ್ತವೆ. ಇದಕ್ಕೆ ಸದನದ ಎರಡೂ ಕಡೆಯ ಸದಸ್ಯರುಗಳು ಮತ್ತು ಸರಕಾರದವರು ಸೇರಿ ಒಂದು ಶಾಶ್ವತವಾದ ಪ್ರಯತ್ನವನ್ನು ಮಾಡಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಮಾನ್ಯ ಅಧ್ಯಕ್ಷರ ಅನುಮತಿಯನ್ನು ಕೋರಿದ್ದೇವೆ. ನಿಲುವಳಿ ಸೂಚನೆಯನ್ನು ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ತಮ್ಮ ಅಧಿಕಾರದಲ್ಲಿ ಇರುವ ಪರಮಾಧಿಕಾರವಾಗಿದೆ. ತಾವು ಏನು ತೀರ್ಮಾನ ತೆಗೆದುಕೊಂಡರೂ ನಾವು ಅದನ್ನು ಒಪ್ಪಿಕೊಳ್ಳುತ್ತೇವೆ. ಅದನ್ನು ಮಾಡಿ ಎರಡು ವರ್ಷಗಳ ಹಿಂದೆ ನಮ್ಮ ಸರಕಾರದ ಅವಧಿಯಲ್ಲಿ ಶಿರಾದಲ್ಲಿ ಇಂಥ ಒಂದು ಘಟನೆಯು ಆಯಿತು. ಶೇಂಗಾ ಬೆಲೆಯ ಬಹಳ ಕಡಿಮೆಯಾಗಿ ಪರಿಸ್ಥಿತಿಯು ಹದಗೆಟ್ಟು, ಕಾನೂನು ಸುವ್ಯವಸ್ಥೆ ಸಮಸ್ಯೆ ಉಂಟಾದ ಉದಾಹರಣೆಯು ನಮ್ಮ ಮುಂದೆ ಇದೆ. ತುಮಕೂರು ಜಿಲ್ಲೆಯಲ್ಲಿ ಕೇಂದ್ರೀಕರಿಸಿದ ಈ ಸಮಸ್ಯೆಯ ಬಗ್ಗೆ ಒಂದು ಸದನದ ಸಮಿತಿಯನ್ನು ಕೂಡ ನಾವು ಮಾಡಿದ್ದೇವೆ. ಅಲ್ಲಿನ ಘನಾವಳಿಗಳಿಗೆ ಕಾರಣ ಏನು ಎಂಬ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಹೇಳಿ, ಎರಡೂ ಕಡೆಯ ಸದಸ್ಯರುಗಳು ಅಲ್ಲಿಗೆ ಹೋಗಿ ಬಂದು ಅಲ್ಲಿನ ಸ್ಥಳೀಯ ವಿಚಾರಗಳನ್ನು ತಿಳಿದುಕೊಂಡು ಬಂದು, ಅನೇಕ ಶಿಫಾರಸ್ಸುಗಳನ್ನು ಅವರು ಮಾಡಿದ್ದಾರೆ. ಅದರ ಹಿನ್ನಲೆಯಲ್ಲಿ ರಾಜ್ಯದಲ್ಲಿ ವಿಶೇಷವಾಗಿ ಈರುಳ್ಳಿ ಬೆಳೆಯ ಬೆಲೆಯು ಬಹಳ ಕಡಿಮೆಯಾಗಿರುವುದರಿಂದಾಗಿ ಮಾರುಕಟ್ಟೆಯಲ್ಲಿ ರೈತರಿಗೆ ಬಹಳ ತೊಂದರೆಯಾಗಿದೆ. ನನಗೆ ತಿಳಿದಿರುವ ಹಾಗೆ ಒಂದು ಕ್ವಿಂಟಾಲ್‌ಗೆ ಪ್ರೊಡಕ್ಷನ್ ಕಾಸ್ಟ್ 500 ರಿಂದ 600 ರೂ.ಗಳ ತನಕ ಆಗುತ್ತದೆ. ಪರಿಸ್ಥಿತಿ ಹೀಗಿರುವಾಗ ಕ್ವಿಂಟಾಲ್‌ಗೆ 150-160 ರೂ.ಗಳಿಗೆ ಇಲ್ಲಿ ಮಾರಾಟ ಮಾಡುವ ಪರಿಸ್ಥಿತಿ ರೈತರಿಗೆ ಬಂದೊದಗಿದೆ. ಹುಬ್ಬಳ್ಳಿ, ಧಾರವಾಡ, ಗದಗ, ಮುಂತಾಗಿ ಉತ್ತರ ಕರ್ನಾಟಕ ಭಾಗಗಳಿಂದ ಬೆಂಗಳೂರಿಗೆ ತಂದು ಮಾರಾಟ ಮಾಡಿದರೆ ಅವರಿಗೆ ತಮ್ಮ ಸಾಗಾಣಿಕೆಯ ಖರ್ಚು ಕೂಡ ಸಿಗುತ್ತಾ ಇಲ್ಲ. ಅಲ್ಲಿಂದ ಇಲ್ಲಿಗೆ ತಂದು

ಪುಕ್‌ಸಟ್ಟೆ ಕೊಟ್ಟು ಸಾಲವನ್ನು ಮಾಡಿ ಬಸ್ ಖರ್ಚು ಹಾಕಿಕೊಂಡು ತಿರುಗಿ ಹೋಗತಕ್ಕಂಥ ಪರಿಸ್ಥಿತಿಯು ಬಂದಿದೆ. ಅಲ್ಲಿಂದ ಇಲ್ಲಿಗೆ ಲಾರಿ ಓನರ್ಸ್ ಕೂಡ ತೆಗೆದುಕೊಂಡು ಬರುವುದಕ್ಕೆ ನಿರಾಕರಿಸುತ್ತಿದ್ದಾರೆ ಎಂದು ಕೂಡ ತಿಳಿದು ಬರುತ್ತದೆ. ಹೀಗಿರುವುದರಿಂದ ಸರಕಾರದವರು ಈ ವಿಚಾರದಲ್ಲಿ ಮಾರ್ಕೆಟಿಂಗ್ ಇಂಟರ್‌ವೆನ್‌ಶನ್ ಮಾಡಬೇಕು ಎಂದು ನಾವು ಆಗ್ರಹಪಡಿಸುತ್ತಿದ್ದೇವೆ. ಅಗ್ರಿಕಲ್ಚರ್, ಮಾರ್ಕೆಟಿಂಗ್, ಹಾರ್ಟಿಕಲ್ಚರ್, ಯಾವುದೇ ಇಲಾಖಾ ಸಚಿವರು ಇರಬಹುದು, ಅವರು ಮೂರು ಜನರು ಸೇರಿ, ತುರ್ತಾಗಿ ಒಂದು ಸಭೆಯನ್ನು ಕರೆದು, ಇವೊತ್ತೇ ಈ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ನಮ್ಮ ಸಲಹೆ ಮತ್ತು ಒತ್ತಾಯ. ರಾಜ್ಯದ ಕೋಲಾರ ಜಿಲ್ಲೆಯಲ್ಲಿ ಕೆಂಪು ಈರುಳ್ಳಿಯನ್ನು ವಿಶೇಷವಾಗಿ ಬೆಳೆಯುತ್ತಾರೆ. ಅದರ ಬಗ್ಗೆ ಮಾನ್ಯ ಭೈರೇಗೌಡರು ಮಾತನಾಡುತ್ತಾರೆ. ಹಾಗೆಯೇ ಮಾನ್ಯ ಎಸ್.ಎಸ್. ಪಾಟೀಲರ್ ಇದರ ಬಗ್ಗೆ ವಿಶೇಷವಾಗಿ ಸಬ್ ಮಿಶನ್ ಮಾಡುತ್ತಾರೆ. ವಿವರಗಳನ್ನು ಕೊಟ್ಟು ತಮ್ಮ ಮನಸ್ಸನ್ನು ಒಲಿಸಿಕೊಳ್ಳುವ ಕೆಲಸವನ್ನು ನಾವು ಮಾಡುತ್ತೇವೆ. ಇದರಲ್ಲಿ ಕೇಂದ್ರ ಸರಕಾರದವರ ಪಾತ್ರವೂ ಕೂಡ ಇದೆ. ರಾಜ್ಯ ಸರಕಾರದವರ ಒತ್ತಾಯದ ಮೇರೆಗೆ ಹೊರದೇಶಗಳಿಗೆ ರಫ್ತು ಮಾಡಲು ಅವಕಾಶವನ್ನು ಮಾಡಿಕೊಡತಕ್ಕಂಥಾದ್ದು, ಮತ್ತು ಈರುಳ್ಳಿಯನ್ನು ಕೆಡಲು ಬಿಡದೆ ಸೂಕ್ತ ಕಾಲದಲ್ಲಿ ರಫ್ತು ಮಾಡಲು ಕ್ರಮವನ್ನು ಜರುಗಿಸುವುದು, ವಿಳಂಬ ಮಾಡದೇ ಈ ಕ್ರಮವನ್ನು ಸಂಬಂಧಪಟ್ಟವರು ತೆಗೆದುಕೊಳ್ಳಬೇಕಾಗುತ್ತದೆ. ಉತ್ತರ ಕರ್ನಾಟಕ ಮತ್ತು ಕೋಲಾರ ಜಿಲ್ಲೆಯ ರೈತರಿಗೆ ವಿಶೇಷವಾಗಿ ಬಹಳ ತೊಂದರೆಯಾಗಿರತಕ್ಕಂಥ ಈ ವಿಷಯವನ್ನು ನಿಲುವಳಿ ಸೂಚನೆಯ ಮೂಲಕವಾಗಿ ಸರಕಾರದ ಗಮನಕ್ಕೆ ವಿವರಗಳನ್ನು ತರುತ್ತಿದ್ದೇವೆ. ಅದರ ಬಗ್ಗೆ ಸೂಕ್ತ ಚರ್ಚೆಯಾಗಬೇಕೆಂದು ಬಯಸಿದ್ದೇವೆ. ಅದರ ಅನ್ವಯ ಕೂಡಲೇ ಮಾರ್ಕೆಟಿಂಗ್ ವ್ಯವಸ್ಥೆಯು ಒಂದು ಸಾರಿ ಸರಿಯಾಗಿ ಆದರೆ, ದಲ್ಲಾಳಿಗಳು, ಮಧ್ಯಸ್ಥರು, ವ್ಯಾಪಾರಸ್ಥರು ಪರಿಸ್ಥಿತಿಯ ದುರ್ಲಾಭ ಪಡೆಯಲು ಆಗುವುದಿಲ್ಲ. ಇಲ್ಲವಾದಲ್ಲಿ ರೈತರನ್ನು ಶೋಷಣೆ ಮಾಡುವ ಕೆಲಸವು ಅವರಿಂದ ನಡೆಯುತ್ತದೆ. ಆ ಬಗ್ಗೆಯೂ ನಾವು ವಿಚಾರ ಮಾಡಬೇಕಾಗುತ್ತದೆ. ಈರುಳ್ಳಿ ಬೆಲೆ ಕಾರಣದಿಂದ ಡೆಲ್ಲಿಯ ಸರಕಾರವೇ ಹೋಗಿರುವುದನ್ನು ಕೂಡ ನಾವು ನೋಡಿದ್ದೇವೆ. ಆದ್ದರಿಂದ ಈ ಹಿನ್ನಲೆಯಲ್ಲಿ ಸರಕಾರದವರು ತತ್‌ಕ್ಷಣವೇ ಕ್ರಮ ತೆಗೆದುಕೊಳ್ಳಬೇಕು. ಹಾಗೆ ಕ್ರಮ ತೆಗೆದುಕೊಳ್ಳಲು ನಾವು ಅನೇಕ ವಿಚಾರಗಳನ್ನು ಇಲ್ಲಿ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಆದುದರಿಂದ ಈ ನಿಲುವಳಿ ಸೂಚನೆಗೆ ತಾವುಗಳು ಅನುಮತಿ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಸಿ. ಭೈರೇಗೌಡ (ವೇಮಗಲ್): ಮಾನ್ಯ ಸಭಾಧ್ಯಕ್ಷರೇ, ಈರುಳ್ಳಿ ಬೆಳೆಯು ನಮ್ಮ ರಾಜ್ಯದ ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿನ ಪ್ರಮುಖ ವಾಣಿಜ್ಯ ಬೆಳೆಯಾಗಿದೆ. ನಮ್ಮಲ್ಲಿ ಮೂರು ತರಹದ ಈರುಳ್ಳಿಯನ್ನು ಬೆಳೆಯುತ್ತಾರೆ. ಸಾಮಾನ್ಯವಾಗಿ ಬಳ್ಳಾರಿ ದಪ್ಪ ಈರುಳ್ಳಿ, ಇನ್ನೊಂದು ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಬೆಂಗಳೂರು ಗುಲಾಬಿ ಈರುಳ್ಳಿ ಹಾಗೂ ಇನ್ನೊಂದು ಸಣ್ಣ ಸಣ್ಣ ಈರುಳ್ಳಿ ಇದು ತುಂಬಾ ರುಚಿಕರವಾಗಿರತಕ್ಕಂಥ ಈರುಳ್ಳಿ - ಹೀಗೆ ರಾಜ್ಯದಲ್ಲಿ ಬೆಳೆಯುತ್ತೇವೆ. ರಾಜ್ಯದ ಉತ್ತರ ಭಾಗದಲ್ಲಿ ಮಳೆಯ ಆಶ್ರಯದಲ್ಲಿ ಅದನ್ನು ಬೆಳೆಯುತ್ತಾರೆ. ಅಲ್ಲಿ ಕೆಲವು ಸಂದರ್ಭಗಳಲ್ಲಿ

11.40 ಎ.ಎಂ

ಒಳ್ಳೆಯ ಬೆಳೆಯು ಬರುತ್ತದೆ. ನಮ್ಮ ಭಾಗದಲ್ಲಿ ಬೆಳೆಯುವ ಈರುಳ್ಳಿಯು ಮಳೆಯ ಆಶ್ರಯದಲ್ಲಿ ಬೆಳೆಯುವ ಬೆಳೆಯಲ್ಲ. ಇದು ಏನಿದ್ದರೂ ಸಹ ನಾವು ಏತ ನೀರಾವರಿಯಿಂದ ಬೆಳೆಯತಕ್ಕಂಥ ಈರುಳ್ಳಿ ಬೆಳೆಯುತ್ತೇವೆ. ಒಂದೊಂದು ಸಂದರ್ಭದಲ್ಲಿ ಇದರ ಬೆಲೆ ಗಗನಕ್ಕೇರುತ್ತದೆ. ಈಗ ಎರಡು ವರ್ಷಗಳ ಹಿಂದೆ ಈರುಳ್ಳಿಗೂ ಒಂದು ಕಾಲ ಎಂಬಂತೆ ಒಂದು ಕೆ.ಜಿ.ಗೆ 50 ರಿಂದ 80 ರೂ.ಗಳ ವರೆಗೂ ಹೋಗಿತ್ತು. ಆದರಿಂದಾಗಿ ಇಡೀ ದೇಶದಲ್ಲಿ ರಾಜಕೀಯ ಅಲ್ಲೋಲಕಲ್ಲೋಲವೂ ಉಂಟಾಯಿತು. ಈರುಳ್ಳಿ ಕೇವಲ ಕೊಯ್ಯುವಾಗ ಕಣ್ಣಲ್ಲಿ ಕಣ್ಣೀರು ಬರಿಸಿದ್ದಲ್ಲದೆ ದೇಶದ ರಾಜಕಾರಣಿಗಳ ಕಣ್ಣೀರು ಕೂಡ ಭರಿಸುವಂತೆ ಮಾಡಿತು. ಇಂಥ ಈರುಳ್ಳಿಯನ್ನು ನಮ್ಮ ರಾಜ್ಯದ ರೈತರುಗಳು ಪ್ರಮುಖ ವಾಣಿಜ್ಯ ಬೆಳೆಯನ್ನಾಗಿ ಬೆಳೆಯುತ್ತಾ ಇದ್ದಾರೆ. ನಾನು ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ನನ್ನ ಮನೆಗೆ ಕೆಲವು ಜನ ರೈತರು ಬೆಳಿಗ್ಗೆ ಫೋನ್ ಮಾಡಿ ನಮಗೆ ಕಾಫಿ ತಿಂಡಿಗೆ ಕಾಸಿಲ್ಲ ಏನು ಮಾಡುವುದು ಅಂದರು, ಬನ್ನಿ ಎಂದು ಅವರನ್ನು ನನ್ನ ಮನೆಗೆ ಕರೆಸಿ ಅವರಿಗೆ ತಿಂಡಿ ಕಾಫಿ ಕೊಟ್ಟು, ಏನಪ್ಪ ನಿಮ್ಮ ಕಷ್ಟ ಅಂತ ವಿಚಾರಿಸಿದಾಗ ವಿಚಾರದ ಮೇಲೆ ಅವರು ಹೇಳಿದ್ದನ್ನು ಕೇಳಿ ನನ್ನ ಕಣ್ಣಿನಲ್ಲೂ ನೀರು ಬಂತು. ನಮ್ಮ ಮಾನ್ಯ ಸಿಂಧ್ಯಾರವರು ಹೇಳಿದಂತೆ ಲಾರಿಯಲ್ಲಿ ತುಂಬಿಸಿದ ಮೇಲೆ ಪೂರಾ ಇಲ್ಲ ಅರ್ಧ ಬಾಡಿಗೆಯಾದರೂ ಕೊಡಬೇಕು, ಏಕೆಂದರೆ ಆ ಲಾರಿ ಮಾರುಕಟ್ಟೆಗೆ ಬಂದರೆ ಅನೇಕ ಸಂದರ್ಭಗಳಲ್ಲಿ ಅದರ ಬಾಡಿಗೇನೂ ಹುಟ್ಟುವುದಿಲ್ಲ, ಅದನ್ನು ಕೈಯಿಂದ ಕೊಟ್ಟು ಖಾಲಿ ಗೋಣಿಚೀಲವನ್ನು ವಾಪಸ್ ತೆಗೆದುಕೊಂಡು ಹೋಗಲಾರದ ಪರಿಸ್ಥಿತಿ ಅನೇಕ ಸಂದರ್ಭಗಳಲ್ಲಿ ಉಂಟಾಗಿದೆ. ಆವಾಗೆಲ್ಲ ರೈತರು ಬಹಳ ನಷ್ಟ ಅನುಭವಿಸುತ್ತಾರೆ. ಹಗಲುರಾತ್ರಿ ಮಳೆ ಗಾಳಿ ಬಿಸಿಲು ಎಂದು ಲೆಕ್ಕಿಸದೆ ಬೆಳೆದಂತಹ ಉತ್ಪನ್ನದ ಬೆಲೆ ಈ ರೀತಿ ಕುಸಿದಾಗ ರೈತ ಹತಾಶನಾಗುತ್ತಾನೆ, ಬೇರೆ ಬೇರೆ ಕಡೆ ಮನಸ್ಸು ಕೊಟ್ಟ ಘಟನಾವಳಿಗಳು ಈ ರಾಜ್ಯದಲ್ಲಿ ನಡೆದಿವೆ. ಮಾನ್ಯ ಅಧ್ಯಕ್ಷರೇ, ಅಂತಹುದೇ ಸಂದರ್ಭ ಈಗ ಈರುಳ್ಳಿಗೆ ಉಂಟಾಗಿದೆ. ಇದು ನನಗಂತೂ ಅರ್ಥವಾಗುವುದಿಲ್ಲ, ಇವತ್ತು ಹೊರದೇಶಗಳಿಂದ ಕೃಷಿ ಉತ್ಪನ್ನಗಳನ್ನು ತರಿಸಿಕೊಳ್ಳಲು ಮುಕ್ತ ಅವಕಾಶ ಇದೆ. ಇದನ್ನು ನಿನ್ನೆ ನನ್ನ ಭಾಷಣದಲ್ಲಿ ತಿಳಿಸಿದ್ದೇನೆ. ಅಂಥದ್ದೇ ಅವಕಾಶವನ್ನು ಈ ದೇಶದ ರೈತರಿಗೂ ಕೊಡಬೇಕಾದ ಅವಶ್ಯಕತೆ ಇದೆ. ಆದರೆ ಅದನ್ನು ಕೊಟ್ಟಿಲ್ಲ. ವಿಶ್ವವೆಲ್ಲ ಒಂದು ಮಾರುಕಟ್ಟೆಯಾಗಬೇಕೆಂದು ಪ್ರತಿಪಾದನೆ ಮಾಡುತ್ತಿರುವವರು ರೈತನಿಗೂ ಅವಕಾಶ ಒದಗಿಸಿಕೊಡಬೇಕು. ಹೊರದೇಶದಿಂದ ತರಬಹುದು, ಆದರೆ ಇಲ್ಲಿಂದ ಹೊರಗೆ ಏನೂ ಹೋಗಬಾರದು ಅನ್ನುತ್ತಾರೆ. ಮಾನ್ಯ ಅಧ್ಯಕ್ಷರೇ, ತಮಗೂ ಗೊತ್ತಿದೆ, ನಾನೂ ಕೂಡ ಈರುಳ್ಳಿ ಬೆಳಗಾರನೇ, ಈ ಗುಲಾಬಿ ಈರುಳ್ಳಿಯನ್ನು ನಮ್ಮ ಮನೆಯಲ್ಲೂ ಬಳಸುವುದಿಲ್ಲ. ಬೆಳೆಯುವಷ್ಟನ್ನೂ ಶ್ರೀಲಂಕಾ ಮಲೇಷ್ಯ, ಸಿಂಗಪುರ ಇಂಥ ದೇಶಗಳಿಗೆ ನೂರಕ್ಕೆ ನೂರರಷ್ಟು ರಫ್ತಾಗುತ್ತದೆ. ಕಳೆದ ಒಂದು ಒಂದೂವರೆ ವರ್ಷದಿಂದ ಉತ್ತರಭಾರತದಲ್ಲಿ ಈ ಈರುಳ್ಳಿ ರಾಜಕಾರಣಿಗಳ ಕಣ್ಣೀರು ತರಿಸುವ ಪರಿಸ್ಥಿತಿ ಬಂತೋ ಆವತ್ತಿನಿಂದ ಈರುಳ್ಳಿ ಮೇಲೆ ಕಣ್ಣು ಬಿತ್ತು. ಯಾವುದನ್ನೂ ರಫ್ತು ಮಾಡಬಾರದೆಂಬ ನಿಬಂಧನೆಯನ್ನು ಕೇಂದ್ರಸರ್ಕಾರ ಹೇರಿತು. ಆದರೆ ನಮ್ಮ ರಾಜ್ಯದವರು ಅಲ್ಲಿ ವಾಣಿಜ್ಯ ಸಚಿವರಾಗಿದ್ದ ಕಾರಣದಿಂದ ನನ್ನ ವೈಯಕ್ತಿಕ ಪ್ರಭಾವ ಅವರ ಮೇಲೆ ಬೀರಿ ಕೊನೇ ಪಕ್ಷ ಬೆಂಗಳೂರು ಗುಲಾಬಿ ಈರುಳ್ಳಿಯನ್ನಾದರೂ ರಫ್ತು ಮಾಡಲು ಅವಕಾಶ ಕೋರಿದ ಮೇಲೆ ಸುಮಾರು 10 ಸಾವಿರ ಟನ್ ಈರುಳ್ಳಿ ರಫ್ತಿಗೆ ಅವಕಾಶ ಕೊಟ್ಟರು. ಅದರಲ್ಲಿ ಈಗ

ಸುಮಾರು ಏಳೂವರೆ ಸಾವಿರ ಟನ್ ರಫ್ತಾಗಿದೆ. ಸೆಪ್ಟೆಂಬರ್ 2ನೇ ತಾರೀಖಿನೊಳಗಾಗಿ ಇದನ್ನು ರಫ್ತು ಮಾಡಲು ಅವಧಿ ಇದೆ. ಆದರೆ ಅಷ್ಟರೊಳಗೆ ರಫ್ತಾಗಲು ಸಾಧ್ಯವಿಲ್ಲ, ಇದನ್ನು ಎರಡು ಬೆಳೆಯಲ್ಲಿ ಬೆಳಿಯುತ್ತಾರೆ, ಮುಂಗಾರಲ್ಲಿ ಬೆಳೆದದ್ದು ಇವತ್ತು ಕೊಳೆತು ಹಾಳಾಗಿ ಹೋಗಿದೆ. ಈಗ ಬಂದಿರುವ ಬೆಳೆಯನ್ನೂ ಬಳಸದ ಪರಿಸ್ಥಿತಿ ಉಂಟಾಗಿದೆ. ಏಕೆಂದರೆ ಯಾರೂ ಇದನ್ನು ಕೊಳ್ಳುವುದಿಲ್ಲ, ವ್ಯಾಪಾರಸ್ಥರೇ ರೈತರ ಹತ್ತಿರ ಬಂದು ಕೊಳ್ಳುತ್ತಾರೆ, ಯಾಕೆಂದರೆ ಇದು ರಫ್ತಾಗುವುದು. ಬಳ್ಳಾರಿ ಈರುಳ್ಳಿ ಮಾರುಕಟ್ಟೆಗೆ ಬರುತ್ತದೆ. ರೈತರ ಬಳಿ ಕೊಂಡಿದ್ದನ್ನು ವ್ಯಾಪಾರಸ್ಥರೇ ಗ್ರೇಡಿಂಗ್ ಮಾಡಿ ರಫ್ತು ಮಾಡುತ್ತಾರೆ. ಇವತ್ತು ರಾಶಿರಾಶಿ ಮರದ ಕೆಳಗೆ ಹಾಕಿದ್ದಾರೆ, ಶೀತಲಗೃಹದಲ್ಲಿ ಇದನ್ನು ಇಡಲು ಬರುವುದಿಲ್ಲ, ಆಡುವ ಗಾಳಿಯಲ್ಲಿ ಇಡಬೇಕು. ಸುಮಾರು 2700 ಟನ್ ಈರುಳ್ಳಿ ರಫ್ತಿಗೆ ನಾವು ಬಹಳ ಪ್ರಯತ್ನಿಸಿ, ದೆಹಲಿಯಲ್ಲಿ ಮಂತ್ರಿಮಂಡಲ ಬದಲಾದ ಮೇಲೂ ಈಗಿನ ವಾಣಿಜ್ಯ ಸಚಿವರ ಮೇಲೆ ಪ್ರಭಾವ ಬೀರಿ ರಫ್ತಿಗೆ ಅವಕಾಶ ಪಡೆದರೆ, ಅದು ಬಂದು ಮೂರು ದಿವಸ ಆಗುವುದಿಲ್ಲ, ಹಿಂದಿನ ಅಗ್ರಿಮೆಂಟ್‌ನಲ್ಲಿ ಎನ್‌ಓಸಿ ಕೊಟ್ಟಿದ್ದ ತಾರೀಖಿಗೆ ಅದು ಜಾರಿಯಾಗಬೇಕು ಇವತ್ತಿನದಕ್ಕೆ ಎನ್‌ಓಸಿ ಕೊಡುವ ಹಾಗಿಲ್ಲ ಅಂತ, ನಿನ್ನೆ ಆ ಸುದ್ದಿ ಬಂದಿದೆ, ಅದೆಲ್ಲಾ ಏನಾಗಬೇಕು? ಮೂಟೆಯಲ್ಲಿ ತುಂಬಿದ್ದು ಹಾಗೇ ಇದೆ. ಮದ್ರಾಸ್ ಬಂದರಿನಲ್ಲಿರುವುದು ಅಲ್ಲೇ ಇದೆ. ಹೊಲದಲ್ಲಿರುವುದು ಇಲ್ಲೇ ಬಿದ್ದಿದೆ. ಈರುಳ್ಳಿ ಮೊಳಕೆ ಬಂತು ಅಂದರೆ ಅದು ಗೊಬ್ಬರವೂ ಆಗುವುದಿಲ್ಲ, ಅದೆಲ್ಲಾ ಏನಾಗಬೇಕು? ಅದಕ್ಕೋಸ್ಕರವೇ ಕೇಂದ್ರದಲ್ಲಿ ಯಾರೇ ಅಧಿಕಾರ ನಡೆಸಲಿ ಏನಾಗುತ್ತದೆ ಎಂದು ವಾಸ್ತವಿಕಾಂಶಗಳನ್ನು ಗ್ರಹಿಸಿ ತಕ್ಕ ಕ್ರಮ ಕೈಗೊಳ್ಳಬೇಕಾದದ್ದು ಅತಿ ಅವಶ್ಯಕ. ದುರದೃಷ್ಟದಿಂದ ಅಂಥ ಪರಿಸ್ಥಿತಿ ಈ ದೇಶದಲ್ಲಿಲ್ಲ. ರೈತನ ಕಡೆ ದೃಷ್ಟಿಯಿಟ್ಟು ಅವನ ಕಷ್ಟ ಸುಖಗಳನ್ನು ನೋಡುವ ವಾತಾವರಣ ಇಲ್ಲಿ ಇರದ ಕಾರಣದಿಂದ ರೈತನ ಬದುಕಿನ ಮೇಲೆ ಚೆಲ್ಲಾಟ ಆಡುವಂತಹ ಪರಿಸ್ಥಿತಿ ಬಂದಿದೆ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಹೇಳಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ 15-20 ದಿವಸಗಳ ಹಿಂದೆ ಒಂದು ಕಾಗದವನ್ನೂ ಬರೆದಿದ್ದೇನೆ. ನೀವು ಕೇಂದ್ರಕ್ಕೆ ಪತ್ರ ಬರೆದು ಈರುಳ್ಳಿ ರಫ್ತಿಗೆ ಒತ್ತಾಯಿಸಿ ಎಂದು ಬರೆದಿದ್ದೇನೆ. ನಾನೂ ಕೇಂದ್ರದ ವಾಣಿಜ್ಯ ಸಚಿವರಿಗೆ ಪತ್ರ ಬರೆದಿದ್ದೇನೆ. ನನ್ನ ಪತ್ರಕ್ಕೆ ಉತ್ತರ ಸಹ ಮಾನ್ಯ ಮುಖ್ಯಮಂತ್ರಿಗಳಿಂದ ಬಂದಿಲ್ಲ. ಕೇಂದ್ರ ಸರ್ಕಾರ ಹಿಂದಿನ ತಾರೀಖಿನಿಂದ ಓನ್‌ಓಸಿ ಕೊಡುವುದಿಲ್ಲ ಎಂದು ಹೇಳಿ ರೈತರನ್ನು ಸಮಾಧಿ ಮಾಡುವ ಪರಿಸ್ಥಿತಿಗಳಿಗೆ ದೂಡಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಕೇಂದ್ರಕ್ಕೆ ಈ ಬಗ್ಗೆ ತೀವ್ರವಾಗಿ ಹೇಳಬೇಕಾಗುತ್ತದೆ. ತನ್ನ ವರ್ಚಸನ್ನು ಅವರ ಮೇಲೆ ಬೀರಬೇಕಾಗುತ್ತದೆ. ರೈತರ ಹಿತ ಕಾಪಾಡಲು ಕೇಂದ್ರ ಮುಂದೆ ಬರದೇ ಇದ್ದರೆ ತೀವ್ರ ಪ್ರತಿಭಟನೆ ಸಲ್ಲಿಸಬೇಕಾಗುತ್ತದೆ. ಇದನ್ನು ರಾಜ್ಯ ಸರ್ಕಾರ ಮುಖ್ಯ ಕರ್ತವ್ಯವೆಂದು ಮಾಡಬೇಕಾಗಿದೆ. ಇದನ್ನು ಇವತ್ತು ಚರ್ಚಿಸಿ ರೈತರ ನೆರವಿಗೆ ಬರುವ ಅವಶ್ಯಕತೆ ಇದೆ, ಚರ್ಚೆಯ ಆರಂಭಿಕ ಸಲ್ಲಿಕೆಗೆ ತಾವು ಅವಕಾಶ ಕೊಟ್ಟಿದ್ದೀರಿ, ಸರ್ಕಾರದ ಹೇಳಿಕೆ ಕೂಡ ಬರಬೇಕಾಗುತ್ತದೆ. ನಾನು ಇದನ್ನು ಹೆಮ್ಮೆಯಿಂದ ಹೇಳುತ್ತೇನೆ. ನಮ್ಮ ಸರ್ಕಾರ ಇದ್ದಾಗ ಬಳ್ಳಾರಿ ಈರುಳ್ಳಿಯನ್ನು ನಾವೆ ಹಲವಾರು ಕಡೆ ಹೋಗಿ ಕೊಂಡಿದ್ದೇವೆ. ಈರುಳ್ಳಿ, ಆಲೂಗಡ್ಡೆ ರೈತರ ನೆರವಿಗೆ ನಾವು ಧಾವಿಸಿದ್ದೆವು. ಅದನ್ನು ದುರುಪಯೋಗಪಡಿಸಿಕೊಂಡವರ ವಿರುದ್ಧ ಕ್ರಮ ಜರುಗಿಸಬೇಕೆಂದು ಆಜ್ಞೆ ಮಾಡಿದ್ದೆ, ಅದು ಏನಾಯಿತೋ ಗೊತ್ತಿಲ್ಲ. ಆಲೂಗಡ್ಡೆ, ಈರುಳ್ಳಿಗೆ ಮಾರ್ಕೆಟ್ ಇಂಟರ್‌ವೆನ್‌ಶನ್ ಸ್ಕೀಂ

ಮಾಡಿದಾಗ ಕೆಲವು ಅಧಿಕಾರಿಗಳು ಶಾಮೀಲಾಗಿ ಮಾಡಿದ ಒಂದೂವರೆ ಎರಡು ಕೋಟಿ ರೂಪಾಯಿಗಳ ವ್ಯಾಪಾರದಲ್ಲಿ ಸುಮಾರು 60 ರಿಂದ 70 ಲಕ್ಷ ನಷ್ಟವುಂಟು ಮಾಡಿದ್ದಾರೆ. ನಾನು ಕೃಷಿ ಸಚಿವನಾಗಿ ರೈತರ ಹಣ ದೋಚಿದ ಇಂಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಲು ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆಯನ್ನು ಕಡತದ ಮೇಲೆಯೇ ಪಡೆದು ಅವರಿಗೆ ವಿಚಾರಣೆ ನಡೆಸಿ ಶಿಕ್ಷೆ ವಿಧಿಸಬೇಕೆಂದು ಒಂದು ಕಡತ ತಯಾರು ಮಾಡಿದ್ದೆ. ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅದು ಏನಾಯಿತೋ ಗೊತ್ತಿಲ್ಲ. ಯಾಕೆಂದರೆ ರೈತರ ಹೆಸರಿನಲ್ಲಿ ದರೋಡೆ ಮಾಡುವುದನ್ನು ಸಹಿಸಲು ನಾನಂತೂ ಸಿದ್ಧನಿರಲಿಲ್ಲ, ಅಂಥ ಧೃಡ ನಿಲುವು ನಿಮ್ಮದೂ ಆಗಿರಬೇಕೆಂಬುದು ನನ್ನ ಆಗ್ರಹ. ರೈತರಿಗೆ ಕಷ್ಟವಿರುವಾಗ ಇವತ್ತು ಹಿಂದೆ ಮುಂದೆ ನೋಡುತ್ತಿದ್ದಾರೆ. ನಾನು ನಿನ್ನೆಯೇ ಹೇಳಿದ್ದೆ, ಹೊಸ ಸರ್ಕಾರದ ಆದ್ಯತೆ ಯಾವುದಕ್ಕೆ ಅಂದರೆ, ಕೈಗಾರಿಕೋದ್ಯಮಿಗಳ ಹತ್ತಿರ ನಾನೇ ಹೋಗುತ್ತೇನೆ ಅಂತ ಮಾನ್ಯ ಮುಖ್ಯಮಂತ್ರಿ ಹೇಳುತ್ತಿದ್ದಾರೆ, ಇಲ್ಲಿ ಮಾನ್ಯ ಕೃಷಿ ಸಚಿವರು, ಮಾರುಕಟ್ಟೆ ಸಚಿವರೂ ಇದ್ದಾರೆ. ಇವರು ಯಾವ ರೈತನ ಹತ್ತಿರ ಹೋಗಿದ್ದರೋ ನನಗಂತೂ ಗೊತ್ತಿಲ್ಲ. ಆದರೆ ನೀವು ರೈತರನ್ನು ಕಾಲ ಕಸದ ರೀತಿಯಲ್ಲಿ ನೋಡುತ್ತಾ ಇದ್ದೀರಿ. ನೀವು ರೈತರ ಹತ್ತಿರ ಹೋಗುವುದಕ್ಕೆ ತಯಾರಾಗಿಲ್ಲ. ನೀವು ಕೈಗಾರಿಕೋದ್ಯಮಿಗಳ ಹತ್ತಿರ ಹೋಗುವುದಕ್ಕೆ ತಯಾರಿದ್ದೀರೇ ಹೊರತು ರೈತರ ಹತ್ತಿರ ಹೋಗುವುದಿಲ್ಲ. ಆದರೆ ರೈತರ ಕಷ್ಟಗಳಿಗೆ ಸ್ಪಂಧಿಸುವ ಕೆಲಸವನ್ನು ನಾವು ಮಾಡಿದ್ದೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಒಂದು ಕ್ಲಾರಿಫಿಕೇಶನ್ ಮಾಡಿ. ಒಂದು ತಿಂಗಳ ಹಿಂದೆ ಇದರ ಪರಿಸ್ಥಿತಿಯು ಏನಾಗಿತ್ತು? ತಾವೇ ಆಗ ಕೃಷಿ ಸಚಿವರಾಗಿದ್ದಿರಲ್ಲವೇ?

ಶ್ರೀ ಸಿ. ಬೈರೇಗೌಡ: ನಾವಿದ್ದಾಗ ಏನು ಮಾಡಿದ್ದೇವೆ ಎಂದು ರೈತರಿಗೆ ಗೊತ್ತು. ನಾವು ರೈತರ ಆಲೂಗಡ್ಡೆಯನ್ನು, ಈರುಳ್ಳಿಯನ್ನು ಕೊಂಡುಕೊಂಡಿದ್ದೇವೆ. ಬೆಳೆ ಹಾನಿಯಾದಂಥ ಸಂದರ್ಭದಲ್ಲಿ ರೈತರ ನೆರವಿಗೆ ಹೋಗಿದ್ದೇವೆ. ನಾವು ಏನು ಮಾಡಿದ್ದೇವೆ ಎಂಬುದು ಮಾನ್ಯ ಖರ್ಗೆಯವರಿಗೂ ಗೊತ್ತಿದೆ. ನಾವು ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ ಎಂಬ ಕಾರಣಕ್ಕಾಗಿ ಇಷ್ಟು ಏರಿಕೆಯ ಧ್ವನಿಯಲ್ಲಿ ಮಾತನಾಡುವ ನೈತಿಕ ಹಕ್ಕು ನನಗಿದೆ. ಈ ದೇಶದಲ್ಲಿ ರೈತರು ಇರತಕ್ಕಂಥ ಒಂದು ವಾತಾವರಣ, ಪಟ್ಟಬದ್ಧ ಹಿತಾಸಕ್ತಿಗಳ ಕೈಗೆ ಸಿಕ್ಕಿ ರೈತರು ಅನುಭವಿಸುತ್ತಿರುವ ಕಷ್ಟ ನಷ್ಟಗಳ ವಿಚಾರ ಮುಂತಾದವುಗಳ ಕಾರಣದಿದಂದ ಇಂಥ ಕಷ್ಟ ಪರಿಸ್ಥಿತಿಯು ಇಂದು ನಿರ್ಮಾಣವಾಗುತ್ತಿದೆ. ನೀವು ಈ ದಿವಸಗಳಲ್ಲಿ ರೈತರ ನೆರವಿಗೆ ಬರುವಲ್ಲಿ ವಿಫಲರಾಗಿದ್ದೀರಿ. ನಿಮ್ಮ ಈ ವಿಳಂಬ ನೀತಿಯಿಂದ ರೈತರಿಗೆ ಮುಂದೆ ಯಾವ್ಯಾವ ದುರಂತಗಳು ಕಾದಿವೆ, ಅದರಿಂದ ರೈತರನ್ನು ತಪ್ಪಿಸಿ, ನಿಮ್ಮಿಂದ ಆಗಿರತಕ್ಕಂಥ ವಿಳಂಬಕ್ಕೆ ಕ್ಷಮೆ ಯಾಚಿಸಿ, ಈಗಲಾದರೂ ಎಲ್ಲಾ ರೀತಿಯಲ್ಲಿ ರೈತರ ನೆರವಿಗೆ ಬರುತ್ತೇವೆ, ರೈತರ ಕಷ್ಟಗಳಿಗೆ ಸ್ಪಂಧಿಸುತ್ತೇವೆ ಎಂಬ ಭರವಸೆಯನ್ನು ಜನರಿಗೆ ಕೊಡಬೇಕು ಎಂಬುದನ್ನು ತಮ್ಮ ಮೂಲಕ ಈ ಸರಕಾರದವರಲ್ಲಿ ಯಾಚನೆ ಮಾಡಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೇ, ಮಾನ್ಯ ಬೈರೇಗೌಡರು ರೈತರಿಗೆ ಆಶಾಕಿರಣವಾಗಿರಬಹುದು. ಆದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಗೆ ಪತ್ರವನ್ನು ಬರೆದರೋ

ಹಾಗೆಯೇ ಕಾಂಗ್ರೆಸ್ ಅಧ್ಯಕ್ಷರಿಗೂ ಒಂದು ಪತ್ರವನ್ನು ಬರೆದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು. ಅವರಿಗೆ ಈರುಳ್ಳಿ ಬೆಲೆ ಮುಂತಾಗಿ ಎಲ್ಲಾ ರಹಸ್ಯಗಳೂ ಗೊತ್ತಿರುವುದರಿಂದ ಕಾಂಗ್ರೆಸ್ ಅಧ್ಯಕ್ಷರಿಗೂ ಪತ್ರವನ್ನು ಬರೆದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು.

ಶ್ರೀ ಎಸ್.ಎಸ್. ಪಾಟೀಲ್: ಸನ್ಮಾನ್ಯ ಸಭಾಧ್ಯಕ್ಷರೇ, ಈ ದಿವಸ ಈ ವಿಚಾರದ ಕುರಿತು ಈಗಾಗಲೇ ನಮ್ಮ ಸನ್ಮಾನ್ಯ ನಾಯಕರುಗಳು ಮಾತನಾಡಿದ್ದಾರೆ. ಪಕ್ಷದ ಅಧ್ಯಕ್ಷರೂ ಕೂಡ ಈ ಸಂದರ್ಭದಲ್ಲಿ ಮಾತನಾಡಿದ್ದಾರೆ. ಮಾನ್ಯ ಅಧ್ಯಕ್ಷರು ಈ ನಿಲುವಳಿ ಸೂಚನೆಗೆ ದಯವಿಟ್ಟು ಅವಕಾಶ ಮಾಡಿಕೊಡಬೇಕಾಗಿ ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ವಿಚಾರವು ನಮ್ಮ ರಾಜ್ಯದ ರೈತರುಗಳ ಸಾವು-ನೋವಿನ ಮತ್ತು ಹೋರಾಟದ ಪ್ರಶ್ನೆಯಾಗಿದೆ. ಒಂದು ರೀತಿಯಲ್ಲಿ ಒರಿಸ್ಸಾದಲ್ಲಿ ಯಾವ ರೀತಿಯಲ್ಲಿ ಒಂದು ದುಸ್ಥಿತಿಯು ಇದೆಯೋ ಅದೇ ರೀತಿಯಲ್ಲಿ ಇಲ್ಲಿಯೂ ಸಹ ಬೇರೆ ರೀತಿಯಲ್ಲಿ ದುಸ್ಥಿತಿಯು ಇದೆ. ಆದರೆ ಪರಿಸ್ಥಿತಿಯು ಹೀಗಿದ್ದಾಗ್ಯೂ ಸರಕಾರದವರು ಕಣ್ಣುಮುಚ್ಚಿಕೊಂಡು ಕುಳಿತಿದ್ದಾರೆ. ಈ ಸಭೆಯಲ್ಲಿರುವವರೆಲ್ಲರೂ ರೈತರ ಮಕ್ಕಳು. ಇಂಥ ಒಂದು ಗಂಭೀರ ವಿಚಾರಕ್ಕೆ ಕೇವಲ ಮಾನ್ಯ ಮಾರ್ಕೆಟಿಂಗ್ ಸಚಿವರು ಉತ್ತರವನ್ನು ಕೊಟ್ಟರೆ ಆಗುವುದಿಲ್ಲ. ಇದರಲ್ಲಿ ಕೃಷಿ, ತೋಟಗಾರಿಕೆ, ಸಹಕಾರ ಸಚಿವರು ಮತ್ತು ಆರ್ಥಿಕ ನಿರ್ವಹಣೆಯನ್ನು ಜವಾಬ್ದಾರಿಯನ್ನು ಹೊಂದಿರುವಂಥ ಮಾನ್ಯ ಮುಖ್ಯಮಂತ್ರಿಯವರು ಎಲ್ಲರೂ ಸೇರಿ ಪರಿಶೀಲಿಸಿ ಒಂದು ನಿರ್ಣಯವನ್ನು ಮಾಡಬೇಕಾಗುತ್ತದೆ,. ಒಟ್ಟಾಗಿ ರೈತರ ಸಮಸ್ಯೆಗಳನ್ನು ಪರಿಹಾರ ಮಾಡಬೇಕಾಗುತ್ತದೆ. ಕಳೆದ ಮೂರು ವರ್ಷಗಳ ಹಿಂದೆ ಮಾನ್ಯ ಹಿರಿಯರಾದಂಥ ಬೈರೇಗೌಡರು ಹೇಳಿದ ಹಾಗೆ ಇದೇ ರೀತಿಯ ಪರಿಸ್ಥಿತಿಯು ರಾಜ್ಯದಲ್ಲಿ ನಿರ್ಮಾಣವಾಗಿತ್ತು. ಆಗ ನಾವು ಮಾರ್ಕೆಟಿಂಗ್ ಫೆಡರೇಶನ್‌ನವರಿಂದ ಆಲೂಗಡ್ಡೆ ಮತ್ತು ಈರುಳ್ಳಿ ಖರೀದಿಗೆ ಹೋಗಿದ್ದೆವು. ಆಗ ಬೆಂಬಲ ಬೆಲೆಯನ್ನು ನಾವು ನೀಡಿದಾಗ ಒಮ್ಮೆಗೆ ಪೇಟೆಯಲ್ಲಿ ಅವುಗಳ ಧಾರಣೆಯ ಏರಿಕೆಯಾಯಿತು. ಆದ್ದರಿಂದ ಇಂಥ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ನಾವೇ ಖರೀದಿ ಮಾಡುವುದು ಬೇಕಾಗಿರುವುದಿಲ್ಲ. ಸರಕಾರದವರು ಇಷ್ಟು ಬೆಂಬಲ ಬೆಲೆ ಎಂದು ಹೇಳಿ ಖರೀದಿಗೆ ನಿಂತರೆ ಧಾರಣೆಯು ಏರುತ್ತದೆ. ಇದನ್ನು ಬಿಟ್ಟು ಸಂಪೂರ್ಣವಾಗಿ ನಾವು ಕೇಂದ್ರ ಸರಕಾರದ ಮೇಲೆ ಹಾಕಿ, ರಾಜ್ಯ ಸರಕಾರದವರು ಕೈಕಟ್ಟಿಕೊಂಡು ಕುಳಿತುಕೊಳ್ಳುತ್ತೇವೆ ಅಂದರೆ ಆಗುವುದಿಲ್ಲ. ಆಗಿನ ದಿನಗಳಲ್ಲಿ ಮಾನ್ಯ ಖರ್ಗೆಯವರು ಕೂಡ ಆ ಸಲಹೆಯನ್ನು ಕೊಟ್ಟಿದ್ದರು. ಈರುಳ್ಳಿ ಬೆಲೆಯು 25 ರಿಂದ 50 ರೂಪಾಯಿಗಳವರೆಗೆ ಏರಿದಾಗ ಪತ್ರಿಕೆಗಳಲ್ಲಿ ಭಾರಿ ಪ್ರಚಾರವಾಗಿ ಅದರ ಪರಿಣಾಮವಾಗಿ ದೇಶದಲ್ಲಿ ಬಿಜೆಪಿಯವರ ನಾಲ್ಕು ಸರಕಾರಗಳು ಉರುಳಿದವು. ಈಗ ನಮ್ಮ ರಾಜ್ಯದಲ್ಲಿ ರೈತರ ಪರಿಸ್ಥಿತಿಯು ಹೇಗೆ ಇದೆ ಎಂದು ತಮಗೆಲ್ಲರಿಗೂ ಗೊತ್ತಾಗಿದೆ. ಇದೇ ಪರಿಸ್ಥಿತಿಯು ಇನ್ನೂ 15 ದಿನಗಳ ಕಾಲ ಮುಂದುವರಿದರೆ ಉತ್ತರ ಕರ್ನಾಟಕದ ರೈತರು ವಿಷ ತೆಗೆದುಕೊಂಡು ಸಾಯುವ ಪರಿಸ್ಥಿತಿ ಉಂಟಾಗಿದೆ. ಸತ್ತ ಮೇಲೆ ಕುಟುಂಬದವರಿಗೆ ಸರಕಾರದವರು ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತಾರೆ. ಇವೊತ್ತು ನಮ್ಮಲ್ಲಿ ಒಂದು ಕ್ವಿಂಟಾಲ್ ಈರುಳ್ಳಿ ಬೆಳೆಯಲು ರೈತರಿಗೆ 600 ರೂಪಾಯಿಗಳು ಬೇಕಾಗುತ್ತದೆ. ಬೆಂಗಳೂರಿನಲ್ಲಿ 150 ರಿಂದ 180 ರೂಪಾಯಿಗಳವರೆಗೆ ಬೆಲೆ ಇದೆ. ಹುಬ್ಬಳ್ಳಿ, ಗದಗ, ಧಾರವಾಡ ಮುಂತಾದ ಕಡೆಗಳಿಂದ ಬೆಂಗಳೂರಿಗೆ ಒಂದು ಲೋಡ್

ಈರುಳ್ಳಿಯನ್ನು ತರಬೇಕಾದರೆ ಎಂಟು ಸಾವಿರ ರೂಪಾಯಿಗಳು ಬೇಕಾಗುತ್ತದೆ. ಅದನ್ನು ಬಡ್ಡಿ ಸಾಲ ಪಡೆದುಕೊಂಡು ರೈತರು ತರಬೇಕಾಗುತ್ತದೆ. ಹೀಗೆ ಇಲ್ಲಿಗೆ ತಂದು ಕಡಿಮೆ ಬೆಲೆಗೆ ಮಾರಾಟ ಮಾಡಿ ಹಿಂದಿರುಗಿ ಹೋಗಲು ಬಸ್‌ಗೆ ಹಣವಿಲ್ಲದೆ ಬಸ್‌ಸ್ಟ್ಯಾಂಡ್‌ನಲ್ಲಿ ಮಲಗಿಕೊಂಡಂಥ ಉದಾಹರಣೆಗಳು ಸಾಕಷ್ಟು ಇವೆ. ಅಂಥ ಒಬ್ಬ ರೈತನು ನಮ್ಮಲ್ಲಿಗೆ ಬಂದು 300 ರೂಪಾಯಿಗಳನ್ನು ತೆಗದುಕೊಂಡು ಹೋದರು. ರೈತರು ಇಂಥ ಕೆಟ್ಟ ಸ್ಥಿತಿಯಲ್ಲಿದ್ದರೂ ಸರಕಾರದ ಕಣ್ಣುಮುಚ್ಚಿ ಕುಳಿತುಕೊಂಡಿದೆ. ಯಾವ ಸಚಿವರೂ ಕೂಡ ಆ ಬಗ್ಗೆ ಮಾತನಾಡುವುದಿಲ್ಲ. ಮೂರು ವರ್ಷಗಳ ಹಿಂದೆ ಇವರು ವಿರೋಧ ಪಕ್ಷದಲ್ಲಿದ್ದಾಗ ನನ್ನ ಕಾರಿನ ಹವಾ ಬಿಟ್ಟಿದ್ದರು. ಯಾರು ಬಿಟ್ಟರು ಅಥವಾ ಬಿಡಿಸಿದರು ಎಂಬುದನ್ನು ನಾನು ಹೇಳುವುದಿಲ್ಲ. ನಾನು ಅದಕ್ಕೆ ಕೋಪಗೊಳ್ಳಲಿಲ್ಲ. ನಾಲ್ಕು ದಿನಗಳ ನಂತರ ಮಾನ್ಯ ಕೃಷಿ ಸಚಿವರಿಗೆ ಫೋನ್ ಮಾಡಿ ವಿಷಯ ತಿಳಿಸಿ, ಕೇಂದ್ರ ಸರಕಾರದವರ ಸಹಾಯ ತೆಗೆದುಕೊಂಡು ರೈತರ ನೆರವಿಗೆ ನಿಂತೆವು. ಆಗ ಮಾನ್ಯ ಹೆಚ್.ಡಿ. ದೇವೇಗೌಡರು ಪ್ರಧಾನಿಯಾಗಿದ್ದರು. ಅವರು 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದರು. ಆ ಹಣದೊಂದಿಗೆ ನಾವು ಈರುಳ್ಳಿ, ಆಲೂಗಡ್ಡೆಯ ಖರೀದಿಗೆ ಹೋಗಿದ್ದೆವು. ಆಗ ಧಾರಣೆಯು ಹೆಚ್ಚಾಗಿ ರೈತರು ಉಳಿದುಕೊಳ್ಳುವಂತಾಯಿತು. ಅದೇ ಪರಿಸ್ಥಿತಿಯು ರಾಜ್ಯದಲ್ಲಿ ಇವೊತ್ತು ನಿರ್ಮಾಣವಾಗಿದೆ. ಅದುದರಿಂದ ಈ ಕುರಿತು ವಿವರವಾದ ಚರ್ಚೆಯಾಗಬೇಕು. ತಾವುಗಳು ದಯವಿಟ್ಟು ಇದಕ್ಕೆ ಅವಕಾಶ ಮಾಡಿಕೊಡಬೇಕು. ಸರಕಾರದಲ್ಲಿ ಇವೊತ್ತು ಹಣ ಇದೆ. ಅದಕ್ಕೆ ಇಲ್ಲವೆಂದು ಹೇಳುವುದಿಲ್ಲ. ಮಾರ್ಕೆಟಿಂಗ್ ಕಮಿಟಿಯಲ್ಲಿ ಹಣ ಇದೆ. ಆ ಹಣವು ಕೂಡ ರೈತರದ್ದೇ ಆಗಿದೆ. ನೂರಾರು ಕೋಟಿಗಳಷ್ಟು ಹಣ ಮಾರ್ಕೆಟಿಂಗ್ ಕಮಿಟಿಯಲ್ಲೇ ಇದೆ. ಹಾರ್ಟಿಕಲ್ಚರ್ ಫೆಟರೇಶನ್‌ಗೆ 50 ಕೋಟಿ ರೂಪಾಯಿಗಳನ್ನು ಕೂಡಲೇ ಸರಕಾರದವರು ಬಿಡುಗಡೆ ಮಾಡಬೇಕು. ಆ ಹಣದಿಂದ ನಾಳೆಯೇ ಖರೀದಿ ಮಾಡಿಸಿ. ತದನಂತರ ಕೂಡಲೇ ಪೇಟೆಯಲ್ಲಿ 800 ರೂಪಾಯಿಗಳಷ್ಟು ಧಾರಣೆ ಏರುತ್ತದೊ ಇಲ್ಲವೋ ಎಂದು ನೋಡಿ. ಈ ಮಾತನ್ನು ನಾನು ಚಾಲೆಂಜ್ ಆಗಿ ಹೇಳುತ್ತಿದ್ದೇನೆ. ಹೀಗೆ ಮಾಡುವುದನ್ನು ಬಿಟ್ಟು ಸರಕಾರದವರು ಕಣ್ಣುಮುಚ್ಚಿಕೊಂಡು ಕುಳಿತರೆ ರೈತರು ಹಾಳಾಗಿ ಹೋಗುತ್ತಿದ್ದಾರೆ. ಮಾನ್ಯ ಡಿ.ಬಿ. ಚಂದ್ರೇಗೌಡರು ಸಂಸದೀಯ ಸಚಿವರಾಗಿ ಹೇಳಿದ ಮಾತುಗಳು ಸತ್ಯವೇ. ತಮ್ಮ ಮಾತನ್ನು ನಾವು ಅಲ್ಲಗಳೆಯುವುದಿಲ್ಲ. ಆದರೆ ಇದು ರೈತರುಗಳ ಜೀವನ್ಮರಣದ ಪ್ರಶ್ನೆ. ನಾವು ಇದನ್ನು ಇಲ್ಲಿ ಚರ್ಚಿಸಬೇಕಾಗುತ್ತದೆ. ಇದರ ವಿವರವಾದ ಚರ್ಚೆಗೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಡಬೇಕೆಂದು ನಾವು ಕೇಳಿಕೊಳ್ಳುತ್ತಿದ್ದೇವೆ. ಮಾನ್ಯ ಡಿ.ಬಿ. ಚಂದ್ರೇಗೌಡರಿಗೆ ರೈತರ ವಿಚಾರಗಳೆಲ್ಲವೂ ತಿಳಿದಿದೆ. ಅವರೂ ಕೂಡ ರೈತರೇ ಆದರಲ್ಲೂ ಅವರು ದೊಡ್ಡ ರೈತರು.

ಅಧ್ಯಕ್ಷರು: ಅವರು ಕಾಫಿ ಬೆಳೆಯುವ ರೈತರು.

ಶ್ರೀ ಎಸ್.ಎಸ್. ಪಾಟೀಲ್: ಅವರು ಕಾಫಿ ಬೆಳೆಯುವ ರೈತರು. ಅವರಿಗೆ ಈರುಳ್ಳಿ ಬೆಳೆಯುವ ರೈತರ ಕಣ್ಣೀರು ಅರ್ಥವಾಗಬೇಕು. ಈರುಳ್ಳಿ ಬೆಳೆಯುವ ರೈತರ ಪರಿಸ್ಥಿತಿಯನ್ನು ಇವೊತ್ತು ಎಲ್ಲಿಗೆ ತಂದು ಬಿಟ್ಟಿದ್ದೀರಿ? ಅತನು ಸಾಯುವ ಸ್ಥಿತಿಗೆ ತಲುಪುತ್ತಿದ್ದಾನೆ. ಕೇವಲ ಈರುಳ್ಳಿ ಒಂದೇ ಬೆಳೆಯ ಬಗ್ಗೆ ಅಲ್ಲ, ರೈತರ ಸಮಗ್ರ ಸ್ಥಿತಿಗತಿಯ ಬಗ್ಗೆ ಸಮಗ್ರವಾದ

ಚರ್ಚೆಯಾಗಬೇಕು. ಇದಕ್ಕೆ ತಾವುಗಳು ಅನುಮತಿ ಮಾಡಿಕೊಡಬೇಕಾಗಿ ನಮ್ಮ ಅರಿಕೆ ಇದೆ. ರೈತರು ಬೆಳೆಯುವ ಎಲ್ಲಾ ಬೆಳೆಗಳ ಹಣೆಬರಹವೂ ಒಂದೇ ಆಗಿದೆ. ಅವರು ಪರಿಸ್ಥಿತಿ ಹದಗೆಟ್ಟು ಆತ್ಮಹತ್ಯೆ ಮಾಡಿಕೊಂಡರೆ ಮತ್ತೆ ಸರಕಾರದವರು ಪರಿಹಾರವನ್ನು ಕೊಡಬೇಕಾಗುತ್ತದೆ. ಅಂಥ ಪರಿಸ್ಥಿಯು ನಿರ್ಮಾಣವಾಗುವ ಮೊದಲು ಈ ಕುರಿತು ವಿವರವಾದ ಚರ್ಚೆಯಾಗಬೇಕಾಗಿದೆ. ಆದ್ದರಿಂದ ಬೆಳೆಯನ್ನು ಸರಕಾರದವರು ಖರೀದಿ ಮಾಡಲು ಮುಂದಾಗ ಬೇಕು. ಹಣ ಇಲ್ಲವೆಂದು ನೆಪ ಹೇಳಿ ಸುಮ್ಮನೆ ಇರಬಾರದು. ಮಾರ್ಕೆಟಿಂಗ್ ಫೆಡರೇಶನ್‌ನಲ್ಲಿ ಹಣವಿದೆ. 50 ಕೋಟಿ ರೂಪಾಯಿಗಳನ್ನು ಕೂಡಲೇ ರಿಲೀಸ್ ಮಾಡಿ. 50 ಕೋಟಿಗಳು ಹೋದರೆ ಹೋಗಲಿ. ಆ ಹಣವು ರೈತರದ್ದೇ ಅಲ್ಲವೆ? ಇದರಿಂದ ಸಾವಿರಾರು ಕೋಟಿ ರೂಪಾಯಿಗಳು ರೈತರಿಗೆ ಲಾಭವಾಗುತ್ತದೆ. ಆ ಒಂದು ದೃಷ್ಟಿಯಿಂದ ಈ ನಿಲುವಳಿ ಸೂಚನೆಗೆ ತಾವು ಅನುಮತಿ ಕೊಟ್ಟು ಧೀರ್ಘ ಚರ್ಚೆಗೆ ಅವಕಾಶ ಮಾಡಿಕೊಡಬೇಕಾಗುತ್ತದೆ ಎಂಬ ವಿಚಾರವನ್ನು ತಮ್ಮಲ್ಲಿ ವಿನಂತಿಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಈಗ ತಾವು ಖರೀದಿಗೆ ಹೋಗಬೇಕಾಗುತ್ತದೆ. ಆದರೆ ಅದೇ ತಾವು ನೋಡುತ್ತೇವೆ, ಮಾಡುತ್ತೇವೆ ಪರಿಶೀಲಿಸುತ್ತೇವೆ ಎಂದು ಹೇಳಿದರೆ ಅದು ಸಾಧುವಲ್ಲ. ದಯವಿಟ್ಟು ಬೇರೆ ರೀತಿಯಲ್ಲಿ ರೈತರ ವಿಚಾರದ ಬಗ್ಗೆ ವಿವರವಾದ ಚರ್ಚೆ ಆಗಬೇಕು. ಸನ್ಮಾನ್ಯ ಅಧ್ಯಕ್ಷರೆ, ತಾವು ಸಹ ರೈತರ ಮಕ್ಕಳು ಇದ್ದೀರಿ. ತಮಗೂ ಇದರ ಅನುಭವ ಇದೆ. ಈ ದೃಷ್ಟಿಯಿಂದ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ರೈತರ ಜೀವನ್ಮರಣದ ಪ್ರಶ್ನೆ. ಅದರಲ್ಲಿಯೂ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕದಲ್ಲಿ ಸಂಪೂರ್ಣವಾಗಿ ಅದರ ಮೇಲೆಯೇ ಅವಲಂಬಿತರಾಗಿದ್ದಾರೆ. ಮತ್ತೆ ಬೇರೆ ಮುಂಗಾರು ಬೆಳೆ ಬಂದಿಲ್ಲ. ಅಲ್ಪಸ್ವಲ್ಪ ಬೆಳೆ ಬಂದಿದೆ. ಅದೂ ಪೂರ್ಣ ಬೆಳೆ ಬಂದಿಲ್ಲ. ಕನಿಷ್ಟ ಎಕರೆಗೆ 50 ಕ್ವಿಂಟಾಲ್ ಬಂದರೆ 500 ರಿಂದ 600 ರೂಪಾಯಿಗಳು ಒಂದು ಮೂಟೆಗೆ ಖರ್ಚು ಬರುತ್ತದೆ. ಆದರೆ ಇವತ್ತು ಬೆಳೆ ಬಂದಿರುವುದು ಒಂದು ಎಕರೆಗೆ 10 ಅಥವಾ 20 ಕ್ವಿಂಟಾಲ್ ಬಂದಿದೆ. ಈ ದೃಷ್ಟಿಯಿಂದ ರೈತ ಇಂದಲ್ಲ ನಾಳೆ ವಿಷ ತೆಗೆದುಕೊಂಡು ಸಾಯುವಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಈ ದೃಷ್ಟಿಯಿಂದ ದಯವಿಟ್ಟು ಈ ಬಗ್ಗೆ ವಿವರವಾದಂತಹ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಒಂದು ದಿವಸ ಅಧಿವೇಶನವನ್ನು ಮುಂದೆ ಹಾಕಿದರೂ ಅಡ್ಡಿ ಇಲ್ಲ. ಬಹುಶಃ ನಾವು ಅವರು ಎಲ್ಲರೂ ರೈತರ ಹೆಸರು ಹೇಳಿಯೇ ಆಯ್ಕೆ ಆಗಿ ಬಂದಿದ್ದೇವೆ, ಇಲ್ಲ ಎಂದಲ್ಲ. ಆ ಕಾರಣದಿಂದ ಅವರೂ ದಯವಿಟ್ಟು ಇದಕ್ಕೆ ಅನುಮತಿ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ದಯವಿಟ್ಟು ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಎಚ್. ಬನ್ನಿಕೋಡ್ (ಹಿರೇಕೆರೂರ್): ಮಾನ್ಯ ಅಧ್ಯಕ್ಷರೇ, ಆಗಾಗ ಇಂತಹ ಸಮಸ್ಯೆಗಳು ಬಂದಾಗ ಮಾತ್ರ ಇಲ್ಲಿ ರಾಜಕೀಯವಾಗಿ ರೈತರ ಬಗ್ಗೆ ಚಿಂತನೆ ಮಾಡಿದರೆ ರೈತರ ಸಮಸ್ಯೆ ಬಗೆ ಹರಿಯಲಾರದು. ವಿರೋಧ ಪಕ್ಷದಲ್ಲಿದ್ದಾಗ ಕಾಂಗ್ರೆಸ್‌ನವರು, ಮಾನ್ಯ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ರೈತರ ಬಗ್ಗೆ ಆಡಿದಂತಹ ಕಳಕಳಿಯ ಮಾತುಗಳನ್ನು ಅಂದು ಮನನೊಂದು ಮಾತನಾಡಿದ್ದರೆ, ಇಂದು ಆಡಳಿತ ಪಕ್ಷದಲ್ಲಿ ರೈತರ ಬಗ್ಗೆ ಈ ಸರ್ಕಾರಕ್ಕೆ ಕಳಕಳಿ ಇದ್ದಿದ್ದರೆ ರೈತರ ನೆರವಿಗೆ ಹೋಗುತ್ತಿದ್ದರು. ಈರುಳ್ಳಿಯ ಸಮಸ್ಯೆ ಏನು

ಇದೆ ಈ ಬಗ್ಗೆ ಇವತ್ತು ಈಗಾಗಲೇ ಹಿರಿಯರೆಲ್ಲಾ ಹೇಳಿದ್ದಾರೆ. ರೈತನಿಗೆ ಆಗಿರತಕ್ಕ ಪಾಡು, ಅವನು ಮಾಡಿದಂತಹ ಖರ್ಚಿಗೂ ಸಹ ಹಣ ಬಾರದೇ ಶಾಶ್ವತ ಸಾಲಗಾರನಾಗುತ್ತಾನೆ. ಅವನು ಸಾಲಗಾರನ ಮಗನಾಗಿ ಹುಟ್ಟಿ ಸಾಲಗಾರನ ಮಗನಾಗಿಯೇ ಸಾಯುವಂತಹ ಪರಿಸ್ಥಿತಿ ಇವತ್ತು ಉದ್ಭವ ಆಗಿದೆ. ಇದು ಮೊದಲಿನಿಂದಲೂ ಬಂದಂತಹದು. ಇದಕ್ಕೆ ಕೇಂದ್ರ ಸರ್ಕಾರದ ರಪ್ತು ಮತ್ತು ಆಮದು ನೀತಿ ಸಹಿತ ಬಹಳಷ್ಟು ಪರಿಣಾಮವನ್ನು ಬೀರಿದೆ. ದೇಶದಲ್ಲಿ ರೈತರು ಬೆಳೆದಂತಹ ಯಾವುದಾದರೂ ಒಂದು ವಸ್ತುವಿನ ಬೆಲೆ ಕಡಿಮೆ ಆಗಿ, ಕಡಿಮೆ ಬೆಳೆ ಬಂದು ಹೆಚ್ಚಿನ ಬೆಲೆ ಆದಾಗ ರೈತನ ಮೇಲೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅದನ್ನು ವಿದೇಶಕ್ಕೆ ಕಳುಹಿಸದಂತೆ ರಪ್ತು ಮಾಡದಂತೆ ಕಡಿಮೆ ಬೆಲೆಯನ್ನು ಮಾಡಲು ಏನು ಮಾಡಬೇಕೋ ಆ ಎಲ್ಲ ವ್ಯವಸ್ಥೆಯನ್ನು ಈ ದೇಶದಲ್ಲಿ ಮಾಡುತ್ತಿದ್ದಾರೆ. ರೈತ ಬೆಳೆದಂತಹ ಬೆಳೆಗೆ ಯೋಗ್ಯ ಬೆಲೆ ಸಿಗದೇ ಇದ್ದಾಗ ಈ ರಾಜ್ಯದಲ್ಲಿ ಮತ್ತು ರಾಷ್ಟ್ರದಲ್ಲಿ ಅವನಿಗೆ ಏನಾದರೂ ಕನಿಷ್ಟ ಬೆಲೆಯನ್ನು ಕೊಡಲಿಕ್ಕೆ ವ್ಯವಸ್ಥೆ ಇದೆಯೇ ಎಂಬ ಬಗ್ಗೆ ನಾವು ಪಕ್ಷಾತೀತವಾಗಿ ಇವತ್ತು ಚಿಂತನೆ ಮಾಡಬೇಕಾಗಿದೆ. ಬೆಲೆ ಹೆಚ್ಚಾದ ಕೂಡಲೇ ಅದನ್ನು ನಿಯಂತ್ರಿಸಲಿಕ್ಕೆ ಎಲ್ಲಾ ಸರ್ಕಾರಗಳೂ ಕಾನೂನನ್ನು ಬಳಕೆ ಮಾಡುತ್ತಿದ್ದಾರೆ. ಬೆಲೆ ಕಡಿಮೆ ಆದಾಗ ಅವನಿಗೆ ಕನಿಷ್ಟ ಅವನು ಮಾಡಿದಂತಹ ವೆಚ್ಚವಾದರೂ ಅವನಿಗೆ ಸಿಗಬೇಕು. ಈ ಬಗ್ಗೆ ಏನಾದರೂ ಒಂದು ಶಾಶ್ವತವಾದ ವ್ಯವಸ್ಥೆಯನನು ಮಾಡಬೇಕು ಎನ್ನುವ ಬಗ್ಗೆ ಈ ದೇಶದಲ್ಲಿ ಯಾವುದೇ ರಾಜಕೀಯ ಪಕ್ಷ, ಯಾವುದೇ ರಾಜ್ಯ ಕೇಂದ್ರಗಳು ಇವತ್ತು ಚಿಂತನೆಯನ್ನು ಮಾಡಲಿಲ್ಲ. ಇವತ್ತು ನಾನು ವಿರೋಧ ಪಕ್ಷದ ಸದಸ್ಯನಾಗಿ ಅಥವಾ ಆಡಳಿತ ಪಕ್ಷದ ಸದಸ್ಯನಾಗಿ ಇಲ್ಲಿ ರೈತರ ಬಗ್ಗೆ ನಾವು ಮಾತನಾಡುವ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ. ನಾವೆಲ್ಲರೂ ರೈತರ ಮಕ್ಕಳೇ. ಈ ಜಗತ್ತಿನಲ್ಲಿ ಸಂಪತ್ತನ್ನು ಏನಾದರೂ ಇವತ್ತು ಉತ್ಪಾದನೆ ಮಾಡುತ್ತಿದ್ದರೆ ಅದು ರೈತ ಭೂಮಿಯಿಂದ ಮಾಡತಕ್ಕ ಸಂಪತ್ತು, ಈ ರಾಷ್ಟ್ರದ ಸಂಪತ್ತು ಬೆಳೆಯಲಿಕ್ಕೆ ಅಭಿವೃದ್ಧಿ ಆಗಲಿಕ್ಕೆ ಕಾರಣ, ಈ ದೇಶದಲ್ಲಿ ರೈತ ತನ್ನ ಜಮೀನಿನಲ್ಲಿ ಬೆಳೆಯದೇ ಹೋದರೆ ಇವತ್ತು ಕ್ಯಾಸ್ಟರ್-ಆಯಿಲ್ ಮಿಲ್‌ಗಳು ಇರುವುದಿಲ್ಲ. ಎಣ್ಣೆಯ ಮಿಲ್‌ಗಳು ಇರುವುದಿಲ್ಲ. ಯಾವುದೇ ಒಂದು ಸಕ್ಕರೆ ಕಾರ್ಖಾನೆ ಇವತ್ತು ಇರುವುದಿಲ್ಲ. ಯಾವುದೇ ಉದ್ದಿಮೆಗಳು ಇರಲಿಕ್ಕೆ ಸಾಧ್ಯ ಇಲ್ಲ. ಆದರೆ ಯಾವ ಕಬ್ಬಿನ ಬೆಳೆ ಇರಬಹುದು. ಇವತ್ತು ಬಳ್ಳಾರಿಯಲ್ಲಿನ ವಿಚಾರ ಪತ್ರಿಕೆಯಲ್ಲಿ ತಾವು ನೋಡಿರಬಹುದು. ಇವತ್ತು ಮೆಣಸಿನಕಾಯಿ ಧಾರಣೆ ಹಾಳಾಗಿ ಇಬ್ಬರು ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ವರದಿ ಆಗಿದೆ. ಅದಕ್ಕಾಗಿ ತಮ್ಮ ಮೂಲಕ ನಾನು ಸರ್ಕಾರಕ್ಕೆ ಹಾಗೂ ಈ ಸದನದ ಯಾವತ್ತೂ ಸದಸ್ಯರಿಗೆ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇನೆ. ರೈತ ಬೆಳೆದಂತಹ ಬೆಳೆಗಳಿಗೆ ಶಾಶ್ವತವಾದಂತಹ ಒಂದು ಕನಿಷ್ಟ ಬೆಂಬಲ ಬೆಲೆಯನ್ನು ಕೊಡಲಿಕ್ಕೆ ಒಂದು ನಿಧಿಯನ್ನು ಈ ರಾಜ್ಯದಿಂದ ಪ್ರಾರಂಭ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ರೈತ ಅಲ್ಲಿ ಸತ್ತಾಗ ಲಕ್ಷ ರೂಪಾಯಿಗಳ ಪರಿಹಾರ ಹಣ ಕೊಡುತ್ತೇವೆ. ಇವತ್ತು ಅಲ್ಲೇನಾದರೂ ದುರ್ಘಟನೆ ಆದರೆ ಕೋಟ್ಯಾಂತರ ರೂಪಾಯಿಗಳ ಪರಿಹಾರ ಕೊಡುವ ಬದಲು ಆ ಒಂದು ದುರ್ಘಟನೆ ಪೂರ್ವದಲ್ಲಿ ಶಾಶ್ವತವಾದಂತಹ, ರೈತರು ಬೆಳೆದಂತಹ ಬೆಳೆಗೆ ಕನಿಷ್ಟ ಬೆಲೆಯನ್ನು ಕೊಡಲಿಕ್ಕೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಇದನ್ನು ಈ ಸದನದ ಎಲ್ಲ

ಸದಸ್ಯರೂ ಚಿಂತನೆ ಮಾಡಬೇಕು ಎಂದು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ. ನಾವು ರೈತರು ಸಹ ತಮ್ಮ ಪಾಲಿನ ಒಂದು ನಿಧಿಯನ್ನು ಕೊಡಲಿಕ್ಕೆ ಮುಂದೆ ಬರುತ್ತಾರೆ ಎನ್ನುವ ಮಾತನ್ನು ತಮ್ಮ ಮೂಲಕ ನಾನು ಹೇಳುತ್ತಿದ್ದೇನೆ. ಇವತ್ತು ರೈತರು ಬೆಳಿದಂತಹ ಮಾಲನ್ನು ಮಾರಾಟಕ್ಕೆ ತಂದಾಗ ನೂರಕ್ಕೆ ಒಂದರಷ್ಟು ಅಥವಾ ಎರಡರಷ್ಟು ಈ ಒಂದು ನಿಧಿಗೆ ಹಣವನ್ನು ಅವನ ಮಾರಾಟದ ಮೂಲಕ, ಸರ್ಕಾರ ಏಪಿಎಂಸಿಯವರು ತೆಗೆದುಕೊಂಡು ಕನಿಷ್ಟ ಅಷ್ಟೇ ಪ್ರಮಾಣದ ಹಣವನ್ನು ರಾಜ್ಯ ಸರ್ಕಾರ ಅದಕ್ಕೆ ಸೇರಿಸಬೇಕು. ನಾಲ್ಕಾರು ವರ್ಷ ಬೇಡ, ಹತ್ತು ವರ್ಷದಲ್ಲಿ ಈ ಒಂದು ನಿಧಿ ಸಾವಿರಾರು ಕೋಟಿ ರೂಪಾಯಿಗಳಾಗುತ್ತದೆ. ಅದರ ಮೂಲಕ ಒಂದು ಸಮಿತಿಯನ್ನೋ ಅಥವಾ ಯಾವುದೋ ಒಂದು ಶಾಸಕೀಯ ವ್ಯವಸ್ಥೆಯನ್ನು ಮಾಡಬೇಕು. ಶಾಶ್ವತವಾಗಿ ರೈತರಿಗೆ ಇರತಕ್ಕಂಥ ಪರಿಸ್ಥಿತಿ, ಸಾಲಗಾರನಾಗಿ ಹುಟ್ಟಿ ಸಾಲಗಾರನಾಗಿ ಸಾಯುವಂತಹ ಈ ಒಂದು ವ್ಯವಸ್ಥೆಯನ್ನು ತಪ್ಪಿಸಬೇಕು. ಇದನ್ನು ತಪ್ಪಿಸಿ ಕನಿಷ್ಟ ಬೆಲೆಯನ್ನಾದರೂ ಕೊಡಲಿಕ್ಕೆ ಸರ್ಕಾರ ಯೋಚನೆ ಮಾಡಬೇಕು. ಮಾನ್ಯ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿ ಇವತ್ತು ಆಡಳಿತ ಪಕ್ಷದಲ್ಲಿದ್ದಾರೆ. ಮಾನ್ಯ ಚಂದ್ರೇಗೌಡರು ಹೇಳಿದರು. ಈರುಳ್ಳಿ ಬೆಳೆಯತಕ್ಕವರಿಗೆ ಹಾಗೂ ಮೆಣಸಿನಕಾಯಿ ಬೆಳೆಯತಕ್ಕವರಿಗೆ ಎಲ್ಲಾ ರೈತರಿಗೂ ಈ ಒಂದು ಸಮಸ್ಯೆ ಇದೆ ಎಂದು. ಕಾಫಿ ಬೆಳೆಯವರಿಗೂ ಈ ಸಮಸ್ಯೆ ಇದೆ. ಎಲ್ಲಾ ರೈತರಿಗೂ ಸಮಸ್ಯೆಗಳು ಇವೆ. ಕಾಫಿಯನ್ನೇ ಬೆಳಿಯಲಿ ಯಾವುದೇ ಬೆಳೆ ಬೆಳೆದರೂ ಕೂಡ ಎಲ್ಲ ರೈತರಿಗೆ ಸಮಸ್ಯೆಗಳು ಇವೆ. ಅದಕ್ಕೆ ಈ ಒಂದು ತಾತ್ಪೂರ್ವಿಕವಾದಂತಹ ವ್ಯವಸ್ಥೆ ಮಾಡಲಿಕ್ಕೆ ಸರ್ಕಾರ ಕೂಡಲೇ ಈರುಳ್ಳಿಯನ್ನು ಕೊಳ್ಳುವಂತಹ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಈ ಶಾಶ್ವತ ವ್ಯವಸ್ಥೆಗೆ ತಮ್ಮ ಮೂಲಕ ನಾನು ಮನವಿ ಮಾಡುವುದೇನೆಂದರೆ ತಾವು ಏನಾದರೂ ಒಂದು ಸಮಿತಿ ಮಾಡಿ ಇದರ ಬಗ್ಗೆ ಶಾಶ್ವತವಾಗಿ ಒಂದು ಪರಿಹಾರವನ್ನು ಕಂಡು ಹಿಡಿಯಬೇಕು. ಈ ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಮಾಡಬೇಕು ಎಂದು ಹೇಳಿ ನನ್ನ ಮನವಿಯನ್ನು ಮಾಡಿಕೊಂಡು ಈ ಬಗ್ಗೆ ವಿವರವಾದಂತಹ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಬಹುತೇಕ ಇದೊಂದು ಬೆಲೆಯ ಬಗ್ಗೆ ಅಲ್ಲ, ರೈತರು ಬೆಳಿದಂತಹ ಎಲ್ಲ ವಸ್ತುಗಳ ಬೆಲೆ ಬಗ್ಗೆ ಒಂದು ವಿವರವಾದಂತಹ ಚರ್ಚೆ ನಡೆಸಿ, ಸದನದ ಸಮಿತಿಯ ಮೂಲಕ ಈ ಒಂದು ವ್ಯವಸ್ಥೆ ತಾವು ಮಾಡಲಿಕ್ಕೆ ಸಹಕರಿಸಬೇಕು, ಸರ್ಕಾರ ಇದಕ್ಕೆ ಒಪ್ಪುತ್ತದೆ ಎನ್ನುವ ಮಾತನ್ನು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಕೊನೆಯದಾಗಿ ಮಾನ್ಯ ವಿರೋಧಪಕ್ಷದ ನಾಯಕರು, ಹಾಗೂ ನಂತರ ಶ್ರೀನಿವಾಸ ಗೌಡರು ಮಾತನಾಡುತ್ತಾರೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವವರು ಇನ್ನೂ 25 ಜನ ಇದ್ದಾರೆ. ಇನ್ನು ಅವರಲ್ಲಿ ನಾವು ಕಡಿತ ಮಾಡಬೇಕಾಗುತ್ತದೆ. ಏಕೆಂದರೆ ಆರು ಗಂಟೆಯ ನಂತರ ಯಾರೂ ಇಲ್ಲಿ ಕೂರುವುದಿಲ್ಲ. ಎಲ್ಲಾ ಎದ್ದು ಹೋಗುತ್ತಿರುತ್ತಾರೆ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಎರಡು ನಿಮಿಷ ಮತ್ತು ಶ್ರೀನಿವಾಸಗೌಡರು ಕೋಲಾರ ಜಿಲ್ಲೆಯ ಈರುಳ್ಳಿ ಬೆಲೆ ವಿಚಾರದಲ್ಲಿ ಮಾತನಾಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರು ಮತ್ತು ಎಸ್.ಎಸ್. ಪಾಟೀಲ್ ಅವರು ಕೆಲವೊಂದು ವಿಚಾರಗಳನ್ನು ಇಲ್ಲಿ ಹೇಳಿದರು. ಇದು ಪ್ರತಿ ವರ್ಷದಲ್ಲಿ ಇಂತಹ ಬವಣೆಯನ್ನು ರೈತ ಅನುಭವಿಸುತ್ತಿದ್ದಾನೆ ಎಂದು ಹೇಳಿದರು. ಇವತ್ತು ಈರುಳ್ಳಿ ಬೆಲೆ ಇರಬಹುದು ಅಥವಾ ಮತ್ತೊಂದು ಬೆಳೆ, ಬೆಲೆ ಇರಬಹುದು. ಪ್ರತಿ ವರ್ಷ ಅತಿವೃಷ್ಟಿ ಸಂದರ್ಭದಲ್ಲಿ ಬೆಳೆ ನಾಶವಾಗಿ ರೈತ ನಷ್ಟವನ್ನು ಅನುಭವಿಸುತ್ತಿದ್ದಾನೆ, ಮತ್ತೊಮ್ಮೆ ಅನಾವೃಷ್ಟಿಯಿಂದ ನಷ್ಟ ಅನುಭವಿಸುತ್ತಿದ್ದಾನೆ. ಮತ್ತೊಂದು ಸಲ ಬೆಲೆ ಬಿದ್ದು ಹೋಗಿ ಸಾಕಷ್ಟು ಪೀಕ್ ಬಂದಿದ್ದರೂ ಸಹ ಅದಕ್ಕೆ ಸರಿಯಾದ ಬೆಲೆ ಇಲ್ಲದೆ ರೈತ ನಷ್ಟ ಅನುಭವಿಸುವಂತಹದು ಮತ್ತು ಸಾಲದಲ್ಲಿಯೇ ಮುಳುಗಿ ಹೋಗುವಂತಹ ಪರಿಸ್ಥಿತಿಯನ್ನು ಇವತ್ತು ನಾವು ಬಹಳಷ್ಟು ಕಡೆ ನೋಡುತ್ತಿದ್ದೇವೆ. ಅದಕ್ಕೆ ಇವತ್ತು ಇದರ ಬಗ್ಗೆ ಒಂದು ಸ್ಪಷ್ಟವಾದ ವ್ಯವಸ್ಥೆ ಆಗಬೇಕು. ಈ ಬಗ್ಗೆ ಯಾವುದೇ ರಾಜಕೀಯ ಇಲ್ಲದಂತಹ ವ್ಯವಸ್ಥೆ ಆಗಬೇಕು. ರೈತನ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳವರೂ ಮಾತನಾಡುತ್ತೇವೆ. ರೈತರನ್ನು ಉದ್ಧಾರ ಮಾಡಬೇಕು. ರೈತರು ಬೆಳೆದಂತಹ ಬೆಳೆಗೆ ಸರಿಯಾದ ಒಂದು ಬೆಲೆ ಕೊಡಬೇಕು, ಬೆಂಬಲ ಬೆಲೆಯನ್ನು ಕೊಡಬೇಕು, ಇದೆಲ್ಲ ಮಾತನಾಡುತ್ತೇವೆ. ಆದರೆ ಆತ ತೊಂದರೆಯಲ್ಲಿದ್ದಾಗ ಇವತ್ತು ಅವರಿಗೆ ಸರಿಯಾದಂತಹ ಪರಿಹಾರ ಸಿಗುತ್ತಿಲ್ಲ. ಅದಕ್ಕಾಗಿ ಇವತ್ತು ರಾಜ್ಯ ಸರ್ಕಾರ ಕೈಗೊಳ್ಳುವಂತಹ ಕ್ರಮಗಳು ಏನು? ಕೇಂದ್ರ ಸರ್ಕಾರ ಕೈಗೊಳ್ಳುವಂತಹ ಕ್ರಮಗಳು ಏನು? ಅಥವಾ ರಾಜ್ಯದಲ್ಲಿ ಇವತ್ತು ಈರುಳ್ಳಿ ಬೆಲೆ ಬಿದ್ದು ಹೋದಂತಹ ಸಂದರ್ಭದಲ್ಲಿ ಏನು ಕ್ರಮ ಕೈಗೊಳ್ಳಬೇಕು? ನಾವು ಕೇಂದ್ರ ಸರ್ಕಾರಕ್ಕೆ ನಾವೇನು ತಿಳಿಸಬೇಕು? ಎನ್ನುವುದನ್ನು ರಾಜ್ಯ ಸರ್ಕಾರ ಒತ್ತಾಯ ಮಾಡಬೇಕಾಗುತ್ತದೆ ಮತ್ತು ಇವತ್ತು ಈರುಳ್ಳಿ ಬೆಲೆ ಯಾವ ರೀತಿ ಬಿದ್ದು ಹೋಗಿದೆ ಅದೇ ರೀತಿ ನಮ್ಮ ಬಳ್ಳಾರಿ ಜಿಲ್ಲೆಯಲ್ಲಿನ ವಿಚಾರ ಮಾನ್ಯ ಬನ್ನಿಕೋಡ್‌ರವರು ಹೇಳಿದರು. ಅಲ್ಲಿ 40 ಸಾವಿರ ಎಕರೆ ಪ್ರದೇಶದಲ್ಲಿ ಈ ಸಲ ಮೆಣಸಿನಕಾಯಿ ಬೆಳೆ ಹಾಕಿದ್ದರು. ಅತಿವೃಷ್ಟಿಯಿಂದಾಗಿ ಪೂರ್ತಿ ಬೆಳೆ ನಾಶವಾಗಿದೆ. ಇದರಿಂದ 4-5 ಜನ ರೈತರು ಆತ್ಮಹತ್ಯೆ ಮಾಡಿಕೊಂಡಂತಹ ಪ್ರಕರಣ ಇವತ್ತು ವರದಿ ಆಗಿದೆ. ಅದಕ್ಕೆ ಈ ಸಂದರ್ಭದಲ್ಲಿ ತಕ್ಷಣ ಕ್ರಮ ಕೈಗೊಳ್ಳುವಂತಹದು ರಾಜ್ಯ ಸರ್ಕಾರದಿಂದ ಆಗಬೇಕಾಗಿರುತ್ತದೆ. ಅದಕ್ಕೆ ಪಕ್ಷಾತೀತವಾಗಿ ಇದಕ್ಕೆ ಏನಾದರೂ ಒಂದು ನಿರ್ದಿಷ್ಟ ಪರಿಹಾರವನ್ನು ಹುಡುಕುವಂತಹ ಕೆಲಸ ಆಗಿ, ಇವತ್ತು ರೈತ ನಿಜವಾಗಿ ತನ್ನ ಪೀಕ್‌ನಲ್ಲಿ ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಸಿಗುವಂತಹದು ಮತ್ತು ಈ ಅತಿವೃಷ್ಟಿ ಸಂದರ್ಭದಲ್ಲಿ ಅವರಿಗೆ ಬೆಳೆ ನಷ್ಟ ಆದಂತಹ ಸಂದರ್ಭದಲ್ಲಿ ಪರಿಹಾರ ಕೊಡುವಂತಹದು ಈ ರೀತಿಯಾದ ಕ್ರಮ ಕೈಗೊಳ್ಳುವಂತಹ ಕೆಲಸ ಆಗಬೇಕು. ಅದಕ್ಕೆ ಎಲ್ಲರ ಅಭಿಪ್ರಾಯದ ಮುಖಾಂತರ ಇದಕ್ಕೊಂದು ನಿರ್ದಿಷ್ಟ ಪರಿಹಾರವನ್ನು ಹುಡುಕಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

12.10 ಪಿ.ಎಂ

+ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ನಾಯಕರು ಮಾತನಾಡಿದ ಹಾಗೆ ಈರುಳ್ಳಿ ಧಾರಣೆ ಬಗ್ಗೆ ರಾಜ್ಯದಲ್ಲಿ ಬಹಳಷ್ಟು ಕುಸಿದಿದೆ. ಸಾಮಾನ್ಯವಾಗಿ ಈರುಳ್ಳಿ ಕೊಯ್ಯುವಾಗ ಹೆಣ್ಣು ಮಕ್ಕಳಿಗೆ ಕಣ್ಣಿನಲ್ಲಿ ನೀರು ಬರುತ್ತದೆ. ಈಗ ಗಂಡಸರಾದ ನಮಗೂ ಕೂಡ ಕೋಲಾರ ಜಿಲ್ಲೆಯಲ್ಲಿ ಬಹಳ ತೊಂದರೆಯಾಗಿದೆ. ತಾವು ಕೋಲಾರ

ಜಿಲ್ಲೆಯವರು. ಆದ್ದರಿಂದ ಕೋಲಾರದಲ್ಲಿ ಗುಲಾಬಿ ಈರುಳ್ಳಿ ಬೆಳೆಯುತ್ತಿದ್ದಾರೆ, ಅದು ಮೂಟೆಗಳಲ್ಲಿ ಕೊಳೆಯುತ್ತಿದೆ. ಅದು ಹಿಂದೆ ನಮ್ಮ ರಾಜ್ಯದವರೇ ಕಾಮರ್ಸ್ ಮಿನಿಸ್ಟರ್ ಆಗಿದ್ದರಿಂದ ರೋಸ್ ಆನಿಯನ್ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರು. ಅದು ಈಗ ಮತ್ತೆ ಬಂದ್ ಆಗಿದೆ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಬೆಳೆಯುವ ಈರುಳ್ಳಿ ಜೊತೆಗೆ ನಾಸಿಕ್‌ನಿಂದ ಕೂಡ ಬಹಳಷ್ಟು ಬೆಂಗಳೂರಿಗೆ ಬರುತ್ತಿದೆ. ಅದನ್ನೂ ಕೂಡ ನಮ್ಮ ಸರ್ಕಾರದವರು ಗಮನಿಸಬೇಕಾಗುತ್ತದೆ. ಕನಿಷ್ಟ ನಮ್ಮ ರಾಜ್ಯದ ಈರುಳ್ಳಿಯನ್ನಾದರೂ ಇಲ್ಲಿ ಮಾರುವುದಕ್ಕೆ ಅವಕಾಶ ಮಾಡಿಕೊಡಬೇಕು. ಶ್ರೀ ಎಸ್.ಎಸ್. ಪಾಟೀಲರು ಹೇಳಿದರು, ಮೂರು ವರ್ಷಗಳ ಹಿಂದೆ ಮಾರ್ಕೆಟಿಂಗ್ ಫೆಡರೇಷನ್ ಮತ್ತು ಹಾರ್ಟಿಕಲ್ಚರ್ ಫೆಡರೇಷನ್‌ಗೆ ಈ ಜವಾಬ್ದಾರಿಯನ್ನು ಕೊಟ್ಟು ಆಲೂಗಡ್ಡೆ ಮತ್ತು ಈರುಳ್ಳಿಯನ್ನು ಅವರೇ ಪರ್ಚೇಸ್ ಮಾಡುತ್ತಿದ್ದರು. ನಾವು ಮಾರ್ಕೆಟಿಂಗ್ ಹೋಗುತ್ತಿದ್ದೆವು ಎಂದು ಹಾಗೆ 50 ರಿಂದ 100 ರೂಪಾಯಿಗಳವರೆಗೆ ರೇಟ್ ಇತ್ತು. ಅದಕ್ಕೆ ಸರ್ಕಾರದವರು ಹಣ ಹುಡುಕಬೇಕಾಗಿಲ್ಲ. ಎಪಿಎಮ್‌ಸಿ ಹಣ ಬರೀ ಬ್ಯಾಂಕಿನಲ್ಲಿ ಎಂಟರಿಂದ 10 ಪರ್ಸೆಂಟ್ ಬಡ್ಡಿ ತೆಗೆದುಕೊಳ್ಳುವ ಪರಿಸ್ಥಿತಿ ಇದೆ. ಈ ಹಣವನ್ನು ಈ ಎರಡು ಸಂಸ್ಥೆಗಳಿಗೆ ಅಂದರೆ ಮಾರ್ಕೆಟಿಂಗ್ ಫೆಡರೇಷನ್ ಮತ್ತು ಹಾರ್ಟಿಕಲ್ಚರ್ ಕೋ-ಆಪರೇಟಿವ್ ಸೊಸೈಟಿಗೆ ಕೊಟ್ಟು ರೈತರಿಗೆ ಬೇಗನೆ ಇದನ್ನು ಕೊಳ್ಳುವ ಹಾಗೆ ಮಾಡಬೇಕು. ಇದರ ಜೊತೆಗೆ ಬೇರೆ ತರಕಾರಿಗಳ ಹಾಗೆ ಕೋಲ್ಡ್ ಸ್ಟೋರೇಜ್‌ನಲ್ಲಿ ಇದನ್ನು ಇಡುವುದಕ್ಕೆ ಬರುವುದಿಲ್ಲ. ಈರುಳ್ಳಿ ಕೋಲ್ಡ್ ಸ್ಟೋರೇಜ್‌ನಲ್ಲಿ ಇಟ್ಟರೆ ಅದು ಎರಡು ದಿವಸಕ್ಕೆ ಹಾಳಾಗುತ್ತದೆ. ಅದು ಒಂದು ದೊಡ್ಡ ಕಾರಣ. ಈರುಳ್ಳಿ ಕೋಲ್ಡ್ ಸ್ಟೋರೇಜ್‌ನಲ್ಲಿ ಇಡುವಂತಹ ಅವಕಾಶ ಇದ್ದಿದ್ದರೆ ಇಷ್ಟು ತೊಂದರೆಯಾಗುತ್ತಿರಲಿಲ್ಲ. ಇದಕ್ಕೆ ಬೇರೆ ಬೇರೆ ವ್ಯವಸ್ಥೆ ಮಾಡಬೇಕು. 10 ವರ್ಷಗಳ ಹಿಂದೆ ನಾನೇ ಕೋಲಾರದಲ್ಲಿ ಓಪನ್ನಾಗಿ ಗಾಳಿ ಬರುವ ಶೆಡ್‌ಗಳನ್ನು ಕೂಡ ಹಾಕಿಸಿದ್ದೆ. ಎಲ್ಲಾ ಎಪಿಎಮ್‌ಸಿಗಳಲ್ಲಿ ಎಲ್ಲೆಲ್ಲಿ ಈರುಳ್ಳಿ ಬೆಳೆಯುತ್ತಾರೆ ಅಲ್ಲಿ ಈ ತರಹ ಗೋಡೌನ್‌ಗಳನ್ನು ಕಟ್ಟಬೇಕೆಂದು ಸರ್ಕಾರದವರು ಸೂಚನೆಯನ್ನು ಎಲ್ಲ ಎಪಿಎಮ್‌ಸಿಗೆ ಕೊಡಬೇಕಾಗುತ್ತದೆ. ಆ ದಿಕ್ಕಿನಲ್ಲಿ ನಾವು ಯೋಚನೆ ಮಾಡಬೇಕಾಗುತ್ತದೆ. ಆಂಧ್ರದಲ್ಲಿರುವ ರೈತರು ' ರೈತ ಬಜಾರ್ ' ಮಾಡುವುದಕ್ಕೆ ಎಷ್ಟು ಒತ್ತು ಕೊಟ್ಟರು ಎಂದರೆ, ಸುಮಾರು 175 ಕೋಟಿ ರೂಪಾಯಿಗಳ ವ್ಯವಸಾಯದ ಎಲ್ಲ ವಸ್ತುಗಳನ್ನು ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಪರ್ಚೇಸ್ ಮಾಡಿದ್ದರು. ನಮ್ಮ ಸರ್ಕಾರ ಇದ್ದಾಗ ಕೂಡ ನಾವು ಕೇಳುತ್ತಿದ್ದೆವು, ನಿನ್ನೆ ಮೊನ್ನೆ ಕೂಡ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಹೇಳಿದೆ, ರೈತ ಮಾರುಕಟ್ಟೆಗೆ ಹೋದರೆ ಕನಿಷ್ಟ 10 ರೂಪಾಯಿ ಸಿಕ್ಕರೆ ದೊಡ್ಡ ಅನುಕೂಲವಾಗುತ್ತದೆ. ಆದ್ದರಿಂದ ನಮಗೆ ಇಷ್ಟು ಹಣವನ್ನು ಈ ಎರಡು ಸಂಸ್ಥೆಗಳಿಗೆ ಬಿಡುಗಡೆ ಮಾಡಬೇಕೆಂದು ಕೂಡ ನಾನು ಈಗಾಗಲೇ ಎರಡು ಸಾರಿ ಮಾನ್ಯ ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡಿದ್ದೇನೆ. ಇದಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂದು ಹೇಳಿ, ಇವತ್ತು ಏನು ನಾಸಿಕ್‌ನಿಂದ ಇಲ್ಲಿಗೆ ಬರುವಂತಹ ಈರುಳ್ಳಿಯನ್ನು ತಡೆಯಬೇಕು. ಇದರ ವಿಷಯದಲ್ಲಿ ಅನೇಕ ಮಾತುಗಳನ್ನು ಹೇಳುವುದು ಇರುವುದರಿಂದ ಈ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಬೇಕು. ಇದರಲ್ಲಿ ನಾವೆಲ್ಲಾ ರೈತರ ಹಿನ್ನೆಲೆಯಿಂದ ಬಂದವರಾದರೂ ಕೂಡ ರೈತರ ಪರಿಸ್ಥಿತಿಯ ಗಂಭೀರತೆಯನ್ನು ನಾವು ಕಡೆಗಾಣಿಸಿದ್ದೇವೆ ಎಂಬ ಮಾತನ್ನು ಈ ಸಭೆಯಲ್ಲಿ ಹೇಳಿ, ಈ ನಿಲುವಳಿ ಸೂಚನೆಗೆ ತಾವು ಅವಕಾಶ ಮಾಡಿ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಈರುಳ್ಳಿ ವಿಷಯದಲ್ಲಿ ಸ್ವಲ್ಪ ಸುಧೀರ್ಘವಾದ ಚರ್ಚೆ ನಡೆದಿದೆ. ನನ್ನ ಅಭಿಪ್ರಾಯದಲ್ಲಿ ಸರ್ಕಾರದವರು ರೈತ ಬೆಳೆದ ಯಾವುದೇ ಬೆಳೆ ಆಗಬಹುದು, ಈರುಳ್ಳಿ ಆಗಬಹುದು, ಮೆಣಸಿನಕಾಯಿ ಆಗಬಹುದು, ಈರುಳ್ಳಿ ಒಂದರಿಂದ ಕೆಲವು ಸರ್ಕಾರಗಳು ಹೋಗಿರುವುದು ನಿಮಗೆ ಗೊತ್ತಿದೆ. ಆದರೂ ಸಹ ಈ ಈರುಳ್ಳಿ ಬಗ್ಗೆ ಆದಷ್ಟು ಬೇಗ ನೀವು ಶೀಘ್ರ ಕಾರ್ಯಕ್ರಮ ಕೈಗೊಳ್ಳಬೇಕು. ಎರಡನೆಯದು ಈಗಾಗಲೇ ನನಗೆ ಬಂದಿರುವ ಮಾಹಿತಿ ಪ್ರಕಾರ 5,000 ಟನ್ ರಫ್ತಿಗೆ ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿದ್ದಾರೆಂದು ಗೊತ್ತಾಯಿತು. ಅದನ್ನು ವೆರಿಫೈ ಮಾಡಿಕೊಳ್ಳೋಣ. ಆದರೂ ಸಹ ಈ ನಮ್ಮ ರೈತರು ಬೆಳೆಯುವುದು ಟೊಮ್ಯಾಟೋ ಆಗಬಹುದು, ಆಲುಗಡ್ಡೆ ಆಗಬಹುದು, ಈರುಳ್ಳಿ ಆಗಬಹುದು, ಮೆಣಸಿನಕಾಯಿ ಆಗಬಹುದು, ಅವೆಲ್ಲಾ ಕೊಳೆಯುವ ಪದಾರ್ಥಗಳು ಏನಿವೆ ಅವುಗಳ ಬಗ್ಗೆ ಆದಷ್ಟು ಬೇಗ ನೀವು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ನನ್ನ ಅನಿಸಿಕೆ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೆ, ನಾವು ಉತ್ತರಾಧಿಕಾರಿಗಳಷ್ಟೆ, ಅವರು ಬಿಟ್ಟು ಹೋಗಿರುವ ಲೆಗಾಸಿಗೆ ನಾವು ಉತ್ತರಾಧಿಕಾರಿಗಳು. ಸ್ವಲ್ಪ ಸಮಯ ಕೊಡಿ. ಇನ್ನು 22-23 ದಿವಸದಲ್ಲಿ ಈ ಬಗ್ಗೆ ಸರ್ಕಾರ ಏನು ಮಾಡಬಹುದು ಎಂಬುದನ್ನು ವಿಚಾರ ಮಾಡುತ್ತೇವೆ.

Sri C. Byre Gowda: We are happy if you inherit our legacy. At least do that. Do that.

ಶ್ರೀ ಪಿ.ಜಿ.ಆರ್. ಸಿಂಧ್ಯಾ: ನಾವು ಮಾಡಿದ್ದೇವೆ ಅಂತ ಹೇಳಿ.

ಅಧ್ಯಕ್ಷರು: ನಾನು ಸ್ವತಃ ಟೊಮ್ಯಾಟೋ ಬೆಳೆದು 25,000 ರೂಪಾಯಿಗಳನ್ನು ಕಳೆದುಕೊಂಡಿದ್ದೇನೆ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ: ಆ ಬಗ್ಗೆ ನಾನು ಉತ್ತರ ಕೊಡಲಿಲ್ಲ, ಇರತಕ್ಕಂತಹ ವಸ್ತು ಸ್ಥಿತಿ ಇದೆ ಎಂದು ಹೇಳಿದೆ. ನೀವು ಏನು ಬಿಟ್ಟು ಹೋಗಿದ್ದೀರಿ, ಆ ಲೆಗಾಸಿ ಅದು ನಮ್ಮದಲ್ಲ, ಅದು 20 ದಿವಸದಲ್ಲಿ ಬಂದಿಲ್ಲ. ಈ ಹಳೆಯ ಲೆಗಾಸಿ ಸರಿ ಮಾಡುವುದಕ್ಕೆ ಸ್ವಲ್ಪ ಸಮಯ ಬೇಕು.

ಶ್ರೀ ಸಿ. ಭೈರೇಗೌಡ: ನಾವು ಏಕೆ ಇಷ್ಟು ಆತುರ ಪಡಬೇಕಾಯಿತು, ಸರ್ಕಾರ ಇವತ್ತು ಈ ವಿಚಾರದಲ್ಲಿ ಮೂಕ ಪಶುವಿನ ಹಾಗೆ ಕುಳಿತಿದೆ.

ಅಧ್ಯಕ್ಷರು: ಮಾನ್ಯ ಸಚಿವರು ಇನ್ನೂ ಈ ಬಗ್ಗೆ ಉತ್ತರ ಕೊಟ್ಟಿಲ್ಲ. ಅದಕ್ಕಿಂತ ಮೊದಲೇ ನೀವು ಈ ವಿಚಾರದಲ್ಲಿ ಸರ್ಕಾರ ಮೂಕ ಪಶುವಿನ ಹಾಗೆ ಕುಳಿತಿದೆ ಎಂದು ಏತಕ್ಕೆ ಹೇಳುತ್ತೀರಿ? ದಯವಿಟ್ಟು ಅವರ ಉತ್ತರವನ್ನು ಕೇಳಿ.

ಶ್ರೀ ಟಿ.ಬಿ. ಜಯಚಂದ್ರ: (ಕೃಷಿ ಸಚಿವರು) ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಮುಖೇನ ಈರುಳ್ಳಿ ಬೆಲೆ ಕುಸಿದಿರುವ ಬಗ್ಗೆ ಮಾರುಕಟ್ಟೆಯಲ್ಲಿ

ರೈತರಿಗೆ ಸರಿಯಾದ ಬೆಲೆ ಸಿಗದೆ ಇರುವ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಈಗಾಗಲೇ ಮಾನ್ಯ ಎಲ್ಲಾ ನಾಯಕರೂ ಕೂಡ ಅವರ ಸ್ಥಳೀಯವಾದ ಪರಿಸ್ಥಿತಿ ಬಗ್ಗೆ ಕೂಡ ಸ್ಪಂದಿಸಿ ಮಾತನಾಡಿದ್ದಾರೆ, ಬಹಳ ಸಂತೋಷ. ಅವರ ಜೊತೆ ತಾವೂ ಕೂಡ ಸ್ವತಃ ಬೆಳೆಗಾರರಾಗಿ ಧ್ವನಿಗೂಡಿಸಿದ್ದೀರಿ. ಆದರೆ ವಸ್ತು ಸ್ಥಿತಿ ಏನಿದೆ? ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಸುಮಾರು 20 ದಿವಸಗಳು ಆಗಿರಬಹುದು. ನಾನು ವಸ್ತುಸ್ಥಿತಿ ಬಗ್ಗೆ ಹೇಳುವುದಕ್ಕೆ ಹೋಗುತ್ತೇನೆ. ಏಕೆಂದರೆ, ಈರುಳ್ಳಿ ಬೆಳೆಗೆ ಏನು ಪ್ರಾಬ್ಲಮ್ ಆಯಿತು ಎನ್ನುವ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಬೆಂಗಳೂರಿನಲ್ಲಿ ಮತ್ತು ಸುತ್ತ ಮುತ್ತಲ ಪ್ರದೇಶಗಳಲ್ಲಿ ಸುಮಾರು 10,000 ಎಕರೆಯಲ್ಲಿ ಈ ರೋಸ್ (ಆನಿಯನ್) ಈರುಳ್ಳಿ ಬೆಳೆಯುತ್ತಾರೆ. ಅದು ಸುಮಾರು 50 ರಿಂದ 70,000 ಕ್ವಿಂಟಾಲ್ ಪ್ರೊಡಕ್ಷನ್‌ಗೆ ಬರುತ್ತದೆ. ಇದು ಲೋಕಲ್ ಕನ್‌ಸಮ್‌ಷನ್ ಅಲ್ಲ. ಎಲ್ಲಾ ಟೌನ್‌ಗಳಲ್ಲಿ ಸಿಂಗಪುರ, ಮಲೇಷಿಯ, ಥೈಲ್ಯಾಂಡ್ ಈ ಎಲ್ಲ ದೇಶಗಳಿಗೆ ಕೂಡ ಎಕ್ಸ್‌ಪೋರ್ಟ್ ಆಗುತ್ತಿದೆ. ಕಳೆದ ಜುಲೈನಲ್ಲಿ ಏನಾಯಿತು ಎಂದರೆ, ಈ ರೋಸ್ ಆನಿಯನ್ ಎಕ್ಸ್‌ಪೋರ್ಟ್ ಮಾಡತಕ್ಕಂಥಾದ್ದನ್ನು ಕೇಂದ್ರದವರು ಕೂಡ ಬ್ಯಾನ್ ಮಾಡಿದರು. ಹಾಗೆ ಮಾಡಿದ ಮೇಲೆ, ನಾವು ಅಧಿಕಾರ ವಹಿಸಿಕೊಂಡ ಮೇಲೆ ನಿರಂತವಾಗಿ ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಇಟ್ಟುಕೊಂಡು ಆ ಬ್ಯಾನ್ ಲಿಫ್ಟ್ ಮಾಡಬೇಕೆಂದು ಒತ್ತಾಯ ಮಾಡಿದ್ದೇವೆ. ನಾನೂ ಕೂಡ ಕೇಂದ್ರ ಸರ್ಕಾರದವರ ಜೊತೆ ಕಾಗದ ಬರೆದು ನಮ್ಮ ಅಧಿಕಾರಿಗಳ ಮುಖೇನ ಒತ್ತಾಯ ಮಾಡಿದ ಮೇಲೆ 3,617 ಮೆಟ್ರಿಕ್‌ಗೆ ಪರವಾನಗಿಯನ್ನು ರಿಲೀಸ್ ಮಾಡಿದರು.

Mr. Speaker: Particularly in Chikkaballapur area.

ಶ್ರೀ ಟಿ.ಬಿ. ಜಯಚಂದ್ರ: ಇದರ ಜೊತೆಯಲ್ಲಿ ತಮಿಳು ನಾಡಿನ ಅನೇಕ ರೈತರೂ ಕೂಡ ಇಲ್ಲಿಗೆ ಬಂದು ಕೊಂಡು ಕೊಂಡು ಹೋಗುತ್ತಾರೆ. ಕೆಪೆಕ್ ಮುಖೇನ ಈಗಾಗಲೇ 3,617 ಟನ್‌ಗೆ ಏನು ಅನುಮತಿ ಕೊಟ್ಟರು, ಮಾನ್ಯ ಭೈರೇಗೌಡರು ಅನುಮಾನ ವ್ಯಕ್ತಪಡಿಸಿದ ರೀತಿಯಲ್ಲಿ ಸುತ್ತೋಲೆ ಮೇಲೆ ಕೆಲವು ರಿಸ್ಟ್ರಿಕ್ಷನ್ಸ್ ಹಾಕತಕ್ಕಂತಹ ಪ್ರಯತ್ನ ನಡೆಯಿತು. ಆದರೆ ಈ ಸುತ್ತೋಲೆಗಿಂತ ಮುಂಚೆ ನಾವು ಈಗಾಗಲೇ ಕ್ರಮವನ್ನು ತೆಗೆದುಕೊಂಡು, ನಮಗೆ ಏನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಪರವಾನಗಿಯನ್ನು ಕೊಟ್ಟಿದ್ದಾರೆ, ಅಷ್ಟು ಮೆಟೀರಿಯಲ್ ಇವತ್ತು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಸೂಕ್ತವಾದ ಕಾರ್ಯಕ್ರಮವನ್ನು ಹಾಕಿದ್ದೇವೆ. ಇಷ್ಟು ಎಕ್ಸ್‌ಪೋರ್ಟ್ ಆಗುವುದಕ್ಕೆ ಯಾವ ಪ್ರಾಬ್ಲಮ್ ಇಲ್ಲ. ನಿಮ್ಮ ಭಾವನೆ ನಮಗೆ ಅರ್ಥವಾಗುತ್ತದೆ. ನೀವು ಸ್ವತಃ ಬೆಳೆಗಾರರು ನಿಮಗೆ ಗೊತ್ತಾಗುತ್ತದೆ. ಆದರೆ ನಮಗೆ ಏನು ಪರವಾನಗಿ ಬಂದಿದೆ ಅದನ್ನು ಎಕ್ಸ್‌ಪೋರ್ಟ್ ಮಾಡುವುದಕ್ಕೆ ನಮಗೆ ಯಾವುದೇ ತೊಂದರೆ ಇಲ್ಲ. ಕೆಪೆಕ್ ಮುಖೇನ ನೋ ಅಬ್ಜೆಕ್ಷನ್ ಕೊಟ್ಟು ಪರ್ಮಿಟ್ ಕೊಟ್ಟು, ಈಗಾಗಲೇ ರಫ್ತು ಮಾಡುವುದಕ್ಕೆ ಎಲ್ಲ ವ್ಯವಸ್ಥೆ ಆಗಿದೆ. ಸರ್ಕ್ಯುಲರ್ ಬಂದಾಗ ಅದನ್ನು ಮೊನ್ನೆ ದಿವಸ ನೋಡಿ ಇದರ ಬಗ್ಗೆ ಯಾವುದೇ ತರಹ ಬಾಧ್ಯತೆ ಇಲ್ಲ, ಈಗಾಗಲೇ ಕಾರ್ಯಕ್ರಮ ಹಾಕಿದ್ದೇವೆ. ಈ ಭರವಸೆಯನ್ನು ನಿಮಗೆ ಕೊಡುತ್ತಿದ್ದೇನೆ. ಈಗಾಗಲೇ, ಈರುಳ್ಳಿ ಬೆಲೆ ಬಗ್ಗೆ ಬ್ಯಾಲೆನ್ಸ್ ಕ್ವಾಂಟಿಟಿ ಈಗ ಸದ್ಯದ ಪರಿಸ್ಥಿತಿಯಲ್ಲಿ ಇಲ್ಲ,

ಮೊನ್ನೆ ಇನ್ನೊಂದು ಕಾಗದ ಬರೆದು ರಿಮೈನಿಂಗ್ ಕ್ವಾಂಟಿಟಿ ಏನಿದೆ ಅದರ ಬಗ್ಗೆ ಹಾರ್ಟಿಕಲ್ಚರ್ ಡೈರೆಕ್ಟರ್ ಎಲ್ಲರನ್ನು ಮನೆಯಲ್ಲಿ ಕರೆದು ಚರ್ಚೆ ಮಾಡಿದ್ದೇನೆ. ಫರ್ದರ್ ಕ್ವಾಂಟಿಟಿ ಕೂಡ ರಿಲೀಸ್ ಮಾಡಬೇಕು, ನಮಗೆ ಅವಶ್ಯಕತೆ ಇದೆ ಎಂಬ ಬಗ್ಗೆ ಕೇಂದ್ರ ಸರ್ಕಾರದವರಿಗೆ ಮನವಿ ಮಾಡಿದ್ದೇವೆ. ನಾವೂ ಏಕೆ ಇದರಲ್ಲಿ ಅಡ್ವಾನ್ಸ್ ಆ್ಯಕ್ಷನ್ ತೆಗೆದುಕೊಂಡೆವು ಎಂದು ಹೇಳಿದರೆ, ಈಗಾಗಲೇ ಬಾಂಗ್ಲಾದೇಶ ಮತ್ತು ಪಾಕಿಸ್ತಾನ ದೇಶಗಳೂ ಕೂಡ ಗುಲಾಬಿ ಈರುಳ್ಳಿ ವಿಷಯದಲ್ಲಿ ನಮ್ಮ ದೇಶದೊಡನೆ ಕಾಂಪೀಟ್ ಮಾಡುತ್ತಿವೆ. ಮಾರುಕಟ್ಟೆಯಲ್ಲಿ ತೊಂದರೆಯಾದೀತು ಎಂಬ ಕಾರಣದಿಂದ ಹಾಗೂ ನಮ್ಮದನ್ನು ಎಸ್ಟಾಬ್ಲಿಷ್ ಮಾಡಬೇಕು ಎಂಬ ಉದ್ದೇಶದಿಂದ ಅಡ್ವಾನ್ಸ್ ಆ್ಯಕ್ಷನ್ ಅನ್ನು ನಾವು ತೆಗೆದುಕೊಂಡಿದ್ದೇವೆ. ತಾವೆಲ್ಲಾ ಹೇಳಿದಂತೆ ಇವತ್ತು ಬಳ್ಳಾರಿ ಮತ್ತು ಇತರ ಭಾಗಗಳಿಂದ ಬರತಕ್ಕಂತಹ ಈರುಳ್ಳಿಗೆ ಬೆಲೆ ಕಡಿಮೆಯಾಗಿರತಕ್ಕದ್ದು ನಿಜ. ಈ ಬಗ್ಗೆ ಅಧಿಕಾರಿಗಳ ಸಭೆಯೊಂದನ್ನು ಕರೆದು ಈ ವಿಷಯದಲ್ಲಿ ಮಾರ್ಕೆಟ್ ಇಂಟರ್‌ವೆನ್‌ಷನ್‌ನಲ್ಲಿ ಏಕೆ ಮಾಡಬಾರದು ಎಂಬ ಬಗ್ಗೆಯೂ ಕೂಡ ನಾವು ಚಿಂತನೆ ಮಾಡುತ್ತಿದ್ದೇವೆ. ಈಗ 2-3-ದಿವಸಗಳಿಂದ ಬೆಲೆಯಲ್ಲಿ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. ಬಳ್ಳಾರಿ ಮತ್ತು ಚಿತ್ರದುರ್ಗ ಭಾಗದಲ್ಲಿ ಇವತ್ತು 500 ರೂ.ಗಳವರೆಗೂ ಬೆಲೆ ಬಂದಿದೆ. ಈ ಬಗ್ಗೆ ಒಂದು ಸ್ಪಷ್ಟವಾದಂತಹ ಭರವಸೆಯೊಂದನ್ನು ನಾನು ಕೊಡಬಯಸುತ್ತೇನೆ. ಹಿಂದೆ ತಾವು ಮಾರ್ಕೆಟ್ ಇಂಟರ್‌ವೆನ್‌ಷನ್‌ನಲ್ಲಿ ಆಲೂಗಡ್ಡೆಯನ್ನು ತೆಗೆದು ಕೊಂಡಂತಹ ಸಂದರ್ಭದಲ್ಲಿ ಏನಾಯಿತು? ಅವತ್ತು ರೈತರ ನೆರವಿಗೆ ಬಂದದ್ದು ನಿಜ. ಸುಮಾರು ಒಂದೂವರೆ ಕೋಟಿ ರೂ.ಗಳ ಅವ್ಯವಹಾರ ಆಗ ಆಯಿತು ಎಂಬ ಬಗ್ಗೆ ಈಗಾಗಲೇ ತಾವು ಪ್ರಸ್ತಾಪ ಮಾಡಿದ್ದೀರಿ. ಅದೂ ಕೂಡ ಸರ್ಕಾರದ ಮುಂದೆ ಈ ವಿಚಾರ ಪರಿಶೀಲನೆಯಲ್ಲಿದೆ. ಈಗಾಗಲೇ ಆ ಬಗ್ಗೆ ಸದನದ ಒಂದು ಸಮಿತಿಯೂ ಕೂಡ ಅದನ್ನು ಏನ್‌ಕ್ವೈರ್ ಮಾಡಿ.....

ಶ್ರೀ ಸಿ. ಬೈರೇಗೌಡ: ಮಾನ್ಯ ಜಯಚಂದ್ರರವರೇ, ಒಂದು ನಿಮಿಷ ನನಗೆ ಮಾತನಾಡಲು ಅವಕಾಶ ಕೊಡಿ. ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷಿ ಸಚಿವರೇ ಅಧ್ಯಕ್ಷರಾಗಿದ್ದಂತಹ ಸದನದ ಸಮಿತಿ ಈ ಅವ್ಯವಹಾರದ ಬಗ್ಗೆ ವರದಿ ಕೊಟ್ಟಿದೆ. ಅದರ ಪ್ರಕಾರ ನಾವು ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಿಂದ ಆ ಸಂಬಂಧಪಟ್ಟ ಕಡತದ ಮೇಲೆ ಇದರ ಬಗ್ಗೆ ವಿಚಾರಣೆ ನಡೆಸಬೇಕೆಂಬ ಆಜ್ಞೆ ಇದೆ. ಆ ಆಜ್ಞೆಯನ್ನು ತಾವು ಜಾರಿ ಮಾಡುತ್ತೀರೋ ಅಥವ ಇಲ್ಲವೋ ಎಂಬುದನ್ನು ಮಾನ್ಯ ಕೃಷಿ ಮಂತ್ರಿಗಳು ದಯವಿಟ್ಟು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಆ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಸಂಬಂಧಪಟ್ಟ ಕಡತ ನಮ್ಮ ಮುಂದೆ ಇದೆ. ಅದರ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದೇವೆ. ನಾವೇ ಕೊಟ್ಟಿರತಕ್ಕ ವರದಿ.....

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಜಯಚಂದ್ರರವರೇ, ಒಂದು ನಿಮಿಷ. ತಾವು ಇನ್ನೂ ಪರಿಶೀಲನೆಯಲ್ಲೇ ಇದ್ದರೆ ಇಲ್ಲಿ ರೈತ ಸಾಯುತ್ತಾನೆ. ಇದರಲ್ಲಿ ಪರಿಶೀಲನೆ ಮಾಡುವ

ಪ್ರಶ್ನೆಯೇ ಇರಬಾರದು. ಈ ಕೆಲಸ ನಾಳೆಗೆ ಹೋಗಬಾರದು, ಇದು ಇವತ್ತೇ ಶುರು ಮಾಡಬೇಕಾದಂತಹ ಸ್ಥಿತಿ ಇದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಪಾಟೀಲರೇ, ಮಾನ್ಯ ಬೈರೇಗೌಡರು ಪ್ರಸ್ತಾಪಿಸಿರತಕ್ಕಂತಹ ವಿಷಯ ಬೇರೆ. ಹಿಂದೆ ಮಾರ್ಕೆಟ್ ಇಂಟರ್‌ವೆನ್‌ಷನ್‌ನಿಂದ ಆಗಿರತಕ್ಕಂತಹ ಅವ್ಯವಹಾರದ ಬಗ್ಗೆ ಇವತ್ತು ಪ್ರಸ್ತಾಪ ಮಾಡುತ್ತಿದ್ದಾರೆ. ಅದರ ಬಗ್ಗೆ ನಾವು ಸೂಕ್ತವಾದಂತಹ ಕಾರ್ಯಕ್ರಮವನ್ನು ಆದಷ್ಟು ಬೇಗನೇ ಹಾಕಿಕೊಳ್ಳುತ್ತೇವೆ ಮತ್ತು ಬಂದಿರತಕ್ಕಂತಹ ವರದಿಯ ಮೇಲೆ ನಾವು ಕ್ರಮವನ್ನೂ ಕೂಡ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಶ್ರೀನಿವಾಸಗೌಡ: ಸರ್ಕಾರದವರು ಈಗ ಏನು ನಿಲುವು ತೆಗೆದುಕೊಳ್ಳುತ್ತಾರೆ? ಈಗಾಗಲೇ ಅನೇಕ ರೈತರು ಮಾರ್ಕೆಟ್‌ನಲ್ಲಿ ಮಾರಾಟ ಮಾಡಿದ್ದಾರೆ. ಅವರು ಈಗಾಗಲೇ ನಷ್ಟ ಅನುಭವಿಸಿದ್ದಾರೆ. ಈಗಿರತಕ್ಕಂತಹ ಉಳಿದ ಕ್ವಾಂಟಿಟಿಯನ್ನು ಎಕ್ಸ್‌ಪೋರ್ಟ್ ಮಾಡತಕ್ಕದ್ದರ ಬಗ್ಗೆ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಖರೀದಿ ಬಗ್ಗೆ ಸರ್ಕಾರದವರೇನು ನಿಲುವು ತೆಗೆದುಕೊಳ್ಳುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಹೇಳಿದ ರೀತಿಯಲ್ಲಿ ಬೇರೆ ಭಾಗಗಳಲ್ಲಿ ಬೆಳೆದಿರತಕ್ಕಂತಹ ಈರುಳ್ಳಿಗೆ ಆ ರಫ್ತಿನ ಮೇಲೆ ನಿಷೇಧ ಇರತಕ್ಕದ್ದು ನಿಜ. ಈಗ ನಾವು ಕೇಂದ್ರ ಸರ್ಕಾರದವರನ್ನು ಮನಸ್ಸು ಒಲಿಸಬೇಕಾಗಿದೆ. ಈಗಾಗಲೇ ಹಾರ್‌ವೆಸ್ಟ್ ಪ್ರಾರಂಭವಾಗಿದೆ. ಇದನ್ನೂ ಕೂಡ ಎಕ್ಸ್‌ಪೋರ್ಟ್ ಮಾಡಬೇಕು ಎಂಬುದರ ಬಗ್ಗೆ ಕೂಡ ನಾವು ಈಗಾಗಲೇ ತೀವ್ರವಾಗಿ ಯೋಚನೆ ಮಾಡಿದ್ದೇವೆ. ಅದರ ಕಡೆ ಗಮನ ಹರಿಸಿ ಅದನ್ನು ಮಾಡುತ್ತಿದ್ದೇವೆ. ಮಾನ್ಯ ಮಾರುಕಟ್ಟೆ ಸಚಿವರು, ಮಾನ್ಯ ತೋಟಗಾರಿಕೆ ಸಚಿವರು ಮತ್ತು ಮಾನ್ಯ ಕೃಷಿ ಸಚಿವರು ಈ ಮೂರು ಜನ ಸಚಿವರು ಇದಕ್ಕೆ ಸಂಬಂಧಪಟ್ಟವರಾಗಿದ್ದೇವೆ. ಇಂತಹ ಅನಿವಾರ್ಯ ಪರಿಸ್ಥಿತಿಗಳು ಬಂದಂತಹ ಸಂದರ್ಭದಲ್ಲಿ ನಮ್ಮ ಎಲ್ಲಾ ಅವಿನ್ಯೂಸ್ ಎಗ್ಸಾಸ್ಟ್ ಆದಮೇಲೆ ಅಂತಿಮವಾಗಿ ಮಾರ್ಕೆಟ್ ಇಂಟರ್‌ವೆನ್‌ಷನ್‌ಗೂ ಕೂಡ ಹೋಗುವುದಕ್ಕೆ ಸರ್ಕಾರ ಹಿಂದೆ ಬೀಳುವುದಿಲ್ಲ. ಇದನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈಗಾಗಲೇ ಬೆಲೆಯಲ್ಲಿ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. ನಾವು ಮಾರ್ಕೆಟ್ ಇಂಟರ್‌ವೆನ್‌ಷನ್‌ಗೆ ಬದ್ಧರಾಗಿದ್ದೇವೆ ಮತ್ತು ಅದಕ್ಕಾಗಿ ತಯಾರಾಗಿದ್ದೇವೆ. ಹಿಂದೆ ಮಾರ್ಕೆಟ್ ಇಂಟರ್‌ವೆನ್‌ಷನ್‌ನಲ್ಲಿ ಸರ್ಕಾರ ಅಷ್ಟೊಂದು ಬಂಡವಾಳ ಹಾಕಿ ಏನಾಯಿತು ಎನ್ನತಕ್ಕದ್ದೂ ಕೂಡ ಎಲ್ಲರಿಗೂ ಗೊತ್ತಿದೆ. ಆ ರೀತಿಯಾಗಿ ತರಾತುರಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಳ್ಳಬಾರದೆಂದು ನಾವು ಭಾವಿಸಿದ್ದೇವೆ. ಈ ಬಗ್ಗೆ ನಾವು ವ್ಯವಸ್ಥಿತವಾಗಿ ಯೋಚನೆ ಮಾಡಿ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡುವುದಕ್ಕೂ ಕೂಡ ನಾವು ಹಿಂದೆ ನೋಡುವುದಿಲ್ಲ ಎನ್ನುವಂತಹ ಸ್ಪಷ್ಟವಾದಂತಹ ಆಶ್ವಾಸನೆಯನ್ನು ನಾನು ಕೊಡುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಸಚಿವರ ಉತ್ತರ ಸಮಂಜಸವಾಗಿದೆ. ಮಾನ್ಯ ಕೃಷಿ ಸಚಿವರು ಸರ್ಕಾರ ಎಲ್ಲಾದಕ್ಕೂ ತಯಾರಾಗಿದೆ ಎಂದು ಹೇಳುವಾಗ ನೀವು ಕೇಳುವುದು ಇನ್ನೇನಿದೆ?

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಮಂತ್ರಿಗಳು ಹೇಳಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಸರ್ಕಾರ ತರಾತುರಿಯಲ್ಲಿ ಇದನ್ನು ಮಾಡುವುದಕ್ಕಾಗುವುದಿಲ್ಲ ಎನ್ನುತ್ತಿದ್ದಾರೆ. ರೈತ ಸತ್ತ ಮೇಲೆ ನಾವೇನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು: ಮಾರ್ಕೆಟ್‌ನಲ್ಲಿ ಕೂಡ ನಾವು ಇಂಟರ್‌ವೀನ್ ಮಾಡುತ್ತೇವೆ ಎಂಬ ಸಮಂಜಸವಾದ ಉತ್ತರವನ್ನು ಸರ್ಕಾರದವರು ಈಗಾಗಲೇ ಕೊಟ್ಟಿರುವಾಗ ನೀವು ಪುನಃ ಸರ್ಕಾರದವರಲ್ಲಿ ಕೇಳುವುದೇನಿದೆ?

ಶ್ರೀ ಕೆ. ಶ್ರೀನಿವಾಸಗೌಡ: ರೈತ ಸತ್ತ ಮೇಲೆ ಕ್ರಮ ತೆಗೆದುಕೊಂಡರೆ ಏನು ಪ್ರಯೋಜನ? ಸರ್ಕಾರ ಶೀಘ್ರಗತಿಯಲ್ಲಿ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಸಚಿವರು ' ಪಕ್ಕಾ ಅರೇಂಜ್‌ಮೆಂಟ್ಸ್ ' ಮಾಡುತ್ತಾರೆ ಬಿಡಿ.

ಶ್ರೀ ಆರ್.ಬಿ. ತಿಮ್ಮಾಪುರ (ಮಾನ್ಯ ಕೃಷಿ ಮಾರುಕಟ್ಟೆ ಸಚಿವರು): ಮಾನ್ಯ ಅಧ್ಯಕ್ಷರೇ, ಈ ಈರುಳ್ಳಿಯ ಬೆಲೆಯ ಬಗ್ಗೆ ಇಲ್ಲಿ ತುಂಬಾ ಸಲ ಚರ್ಚೆ ಆಗಿದ್ದುಂಟು. ಆದರೆ ಜೊತೆಗೆ ಹೆಣ್ಣು ಮಕ್ಕಳು ಕಣ್ಣೀರು ಹಾಕುವುದರ ಜೊತೆಗೆ ಈ ಬಗ್ಗೆ ಕೆಲವು ಪಕ್ಷಗಳೂ ಕೂಡ ಕಣ್ಣೀರು ಹಾಕಿದ್ದನ್ನು ಹಿರಿಯ ಸದಸ್ಯರುಗಳು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ರೈತರ ಪರವಾಗಿ ಕಾರ್ಯಕ್ರಮಗಳನ್ನು ಏನು ಹಾಕಿಕೊಳ್ಳಲಾಗಿದೆ ಎಂದರೆ, ' ಕನಿಷ್ಟ ಬೆಲೆ ' ನಿಗದಿ ಮಾಡುವುದರ ಬಗ್ಗೆ ಹಾಗೂ ' ಆವರ್ತ ನಿಧಿ ' ಸ್ಥಾಪನೆ ಮಾಡುವ ವಿಚಾರದ ಬಗ್ಗೆ ಹಿಂದಿನ ಸರ್ಕಾರದವರು ಕೆಲವೊಂದು ಯೋಜನೆಗಳನ್ನು ಇಟ್ಟುಕೊಂಡಿದ್ದರು. ಅದು ಹತ್ತು ಹಲವಾರು ಸಾರಿ ಆರ್ಥಿಕ ಇಲಾಖೆಗೆ ಹೋಗಿ ಇನ್ನೂವರೆಗೆ ಹಾಗೆಯೇ ಉಳಿದಿರುವಂತಹ ಪರಿಸ್ಥಿತಿ ಉಂಟಾಗಿದೆ. ರೈತರಿಗೆ ಅನುಕೂಲವಾಗತಕ್ಕ ಕನಿಷ್ಟ ಬೆಲೆ ನಿಗದಿ ಹಾಗೂ ಆವರ್ತ ನಿಧಿ ಸ್ಥಾಪನೆಯ ವಿಷಯದಲ್ಲಿ ಎಪಿಎಂಸಿ ಯಿಂದ 15 ಕೋಟಿ ರೂಪಾಯಿಗಳು ಹಾಗೂ ಸರ್ಕಾರದಿಂದ 15 ಕೋಟಿ ರೂಪಾಯಿಗಳ ಹಣವನ್ನು ಕೊಡಲು ಹಿಂದಿನ ಸರ್ಕಾರ ಯೋಚಿಸಿತ್ತು. ಈ ಬಗ್ಗೆ ನನಗಿಂತಲೂ ಹೆಚ್ಚಾಗಿ ಮಾನ್ಯ ಬೈರೇಗೌಡರಿಗೆ ತಿಳಿದಿದೆ ಎಂದು ನಾನು ಭಾವಿಸುತ್ತೇನೆ. 15 ಕೋಟಿ ರೂಪಾಯಿಗಳನ್ನು ಕೊಡಲಿಕ್ಕಾಗುವುದಿಲ್ಲ ಎಂದು ಹೇಳಿದಾಗ 10 ಕೋಟಿ ರೂಪಾಯಿಗಳನ್ನು ಕೇಳಲಾಯಿತು. ಅದೂ ಆಗುವುದಿಲ್ಲ, ಸುಮಾರು 1 ಕೋಟಿ ರೂಪಾಯಿಗಳನ್ನು ಕೊಡುತ್ತೇನೆ ಎಂದು ಹಿಂದೆ ಹಣಕಾಸಿನ ಇಲಾಖೆಯವರು ತಿಳಿಸಿದ್ದು ಮಾನ್ಯ ಬೈರೇಗೌಡರಿಗೆ ಚೆನ್ನಾಗಿ ಗೊತ್ತಿದೆ. ಮಾನ್ಯ ಪಾಟೀಲ್‌ರವರು, ಮಾನ್ಯ ಸಿಂಧ್ಯಾರವರು, ಮಾನ್ಯ ವಿರೋಧ ಪಕ್ಷದ ನಾಯಕರು ಈರುಳ್ಳಿಯ ಬೆಲೆಯ ಬಗ್ಗೆ ರೈತರಿಗೆ ಅನುಕೂಲ ಆಗತಕ್ಕ ರೀತಿಯಲ್ಲಿ ಏನು ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕು ಎನ್ನತಕ್ಕಂತಹ ಮುಂದಾಲೋಚನೆಗಳ ಬಗ್ಗೆ ಹೇಳಿದ್ದಾರೆಯೇ ವಿನಹಃ 10.11.99ರವರೆಗೆ ರೇಟ್ ಎಷ್ಟಿತ್ತು ಎಂದರೆ, ಹುಬ್ಬಳ್ಳಿಯಲ್ಲಿ 500 ರೂಪಾಯಿಗಳು ಇದ್ದರೆ ಬೆಂಗಳೂರಿನಲ್ಲಿ 590 ರೂಪಾಯಿಗಳು ಇತ್ತು. ಈ ರೀತಿಯಲ್ಲಿ ಬೆಲೆಯಲ್ಲಿ ವ್ಯತ್ಯಾಸ ಇದೆ. 1997-98ರಲ್ಲಿ 250 ರೂಪಾಯಿಗಳಿಗೆ ಬೆಲೆ ಏನು ಇಳಿದಿತ್ತು. ಆ ತರಹದ ಬೆಲೆ ಈ ಬಾರಿ

ಇಳಿಯದಿದ್ದರೂ ಸಹ ಅಲ್ಲಲ್ಲಿ ಬೆಲೆ ಕಡಿಮೆಯಾಗಿರುವಂತಹ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ. ಹಿಂದೆ ನಾವು ಈರುಳ್ಳಿಯನ್ನು ಖರೀದಿ ಮಾಡಿದೆವು ಎಂಬ ಮಾತನ್ನು ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದರು. ರೈತರ ಕಣ್ಣೀರನ್ನು ಒರೆಸತಕ್ಕಂತಹ ಸ್ಥಿತಿ ನಿಮ್ಮ ಸರ್ಕಾರದಲ್ಲಿ ಎಲ್ಲ ಎನ್ನತಕ್ಕ ಮಾತನ್ನೂ ಕೂಡ ಅವರು ಹೇಳಿದರು. ಅವರ ಸರ್ಕಾರ ಇದ್ದಾಗ ಅವರು ಈರುಳ್ಳಿಯನ್ನು ಎಂದೂ ಖರೀದಿ ಮಾಡಿಯೇ ಇಲ್ಲ. ಅವರು ಆಲೂಗಡ್ಡೆಯನ್ನು ಖರೀದಿ ಮಾಡಿದರು. ಈರುಳ್ಳಿಯನ್ನು ಖರೀದಿ ಮಾಡಿದಂತಹ ಉದಾಹರಣೆಗಳು ಯಾವುದೂ ಇಲ್ಲ. ಟೊಮ್ಯಾಟೋ ಮತ್ತು ಈರುಳ್ಳಿ ಇವುಗಳ ಕನಿಷ್ಟ ಬೆಲೆ ನಿಗಧಿಪಡಿಸುವುದು ಮತ್ತು ಆವರ್ತ ನಿಧಿ ಸ್ಥಾಪನೆ ಮಾಡುವ ವಿಷಯ ನಮ್ಮ ಸರ್ಕಾರದ ಮುಂದೆ ಆದಷ್ಟು ಬೇಗನೆ ಈ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.

ಅಧ್ಯಕ್ಷರು: ಈರುಳ್ಳಿಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು, ಎಲ್ಲಾ ಪಕ್ಷಗಳ ಸದಸ್ಯರೂ ಕೂಡ ಮಾತನಾಡಿದ್ದಾರೆ. ಚರ್ಚೆಗೆ ಇಬ್ಬರೂ ಮಂತ್ರಿಗಳು ಸಮಂಜಸವಾದ ಉತ್ತರವನ್ನು ನೀಡಿದ್ದಾರೆ. ತದನಂತರ ನಾವು ದೀರ್ಘವಾಗಿ ಈರುಳ್ಳಿ ಬಗ್ಗೆ ಚರ್ಚಿಸಬೇಕು ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದರು. ಮಾನ್ಯ ಮಂತ್ರಿಗಳ ಉತ್ತರವನ್ನು ಕೇಳಿದ ಮೇಲೆ ಇದರ ಮೇಲಿನ ಚರ್ಚೆ ಇಷ್ಟಕ್ಕೇ ಸೀಮಿತಗೊಳಿಸಬೇಕೆಂದು ನಾನು ಮಾನ್ಯ ಸದಸ್ಯರಲ್ಲಿ ಕೋರುತ್ತೇನೆ. ಈ ಬಗೆಗಿನ ನಿಲುವಳಿ ಸೂಚನೆಯನ್ನು ಅಂಗೀಕರಿಸಲು ನಾನು ನಿರಾಕರಿಸಿದ್ದೇನೆ. ಇದರ ಜೊತೆಗೆ ಮಾನ್ಯ ಸಿಂಧ್ಯಾರವರು ಹೇಳಿದಂಥ ಮಾತು ಏನಿದೆ. "ತಿರಸ್ಕರಿಸುವಂಥಾದ್ದು" ಎನ್ನುವ ಆ ಒಂದು ವರ್ಡ್‌ಅನ್ನು ಕಡತದಿಂದ ತೆಗೆದುಹಾಕಿದ್ದೇನೆ.